ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಮಾಸ ಪತ್ರಿಕೆ

ಸಂಪುಟ : 4 । ಸಂಚಿಕೆ : 3 । ಮಾರ್ಚ್ : 2022 । ಪುಟಗಳು : 20 । ಬೆಲೆ : 25/-

ಕರ್ನಾಟಕ ರಾಜ್ಯ
ಸಹಕಾರ ಪತ್ತಿನ ಸಂಘಗಳ
ಮಹಾಮಂಡಳದ ಪ್ರಕಟಣೆ

## ಸಮಸ್ತ ಸಹಕಾರಿ ಬಂಧುಗಳಿಗೆ
## ಮಹಾಶಿವರಾತ್ರಿಯ ಶುಭಾಶಯಗಳು



ಕೆ. ಲಲಿತ ಜಿ.ಟಿ. ದೇವೇಗೌಡ
ಅಧ್ಯಕ್ಷರು

ಕನಕ ಮಹಾಮಣಿ ಭೂಷಿತ ಲಿಂಗಂ
ಫಣಿಪತಿ ವೇಷ್ಟಿತ ಶೋಭಿತ ಲಿಂಗಂ।
ದಕ್ಷ ಸುಯಜ್ಞ ವಿನಾಶನ ಲಿಂಗಂ
ತತ್-ಪ್ರಣಮಾಮಿ ಸದಾಶಿವ ಲಿಂಗಂ॥



ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡ
ಉಪಾಧ್ಯಕ್ಷರು

# ಪತ್ತಿನ ಮಹಾಮಂಡಳದ ನೂತನ ಕಟ್ಟಡ ನಿರ್ಮಾಣ ಕಾರ್ಯ ವೀಕ್ಷಣೆ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಬೆಂಗಳೂರಿನ ನಂದಿನಿ ಬಡಾವಣೆಯಲ್ಲಿ ನಿರ್ಮಿಸಲಾಗುತ್ತಿರುವ ಮಹಾಮಂಡಳದ ಆಡಳಿತಮಂಡಳಿ ಕಛೇರಿಯ ಕಟ್ಟಡದ ಕಾಮಗಾರಿಗಳನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀ ಕೆ.ಲಲಿತ ಜಿ.ಟಿ. ದೇವೇಗೌಡರವರು, ಉಪಾಧ್ಯಕ್ಷರಾದ ಶ್ರೀ ಕೆ.ಕೆ. ಮಹೇಂದ್ರಪ್ರಸಾದ್ ಗೌಡರವರು, ನಿರ್ದೇಶಕರುಗಳಾದ ಶ್ರೀ ಡಿ.ಚನ್ನಯ್ಯರವರು ಮತ್ತು ಶ್ರೀ ಜಿ.ಮಲ್ಲಿಕಾರ್ಜುನಯ್ಯ ರವರು ವೀಕ್ಷಿಸಿದರು.










# ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಂದ ಪಲ್ಸ್ ಪೋಲಿಯೊ ಲಸಿಕೆಗೆ ಚಾಲನೆ




ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ರಾಷ್ಟ್ರೀಯ ಲಸಿಕಾ ದಿನದ ಅಂಗವಾಗಿ ಮಕ್ಕಳಿಗೆ ಪಲ್ಸ್ ಪೋಲಿಯೊ ಲಸಿಕೆ ಹಾಕುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗದ್ಗುರು ವಚನಾನಂದ ಸ್ವಾಮಿಗಳು ಮೊದಲಾದವರು ಉಪಸ್ಥಿತರಿದ್ದರು.

## ಜಾಹಿರಾತು ಮನವಿ




ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಪೂರಕವಾಗಿ ಮಾಸಿಕ ಸಹಕಾರ ಪತ್ರಿಕೆಯನ್ನು ಪ್ರಕಟ ಮಾಡುತ್ತಿದ್ದು, ಪತ್ತಿನ ಸಹಕಾರ ಚಳವಳಿಯ ಪೂರಕ ಚಟುವಟಿಕೆಗಳಿಗೆ ಪ್ರಚಾರ ನೀಡುತ್ತಾ ಬರುತ್ತಿದೆ. ರಾಜ್ಯದ ಪತ್ತಿನ ಸಹಕಾರ ಸಂಘಗಳು ತಮ್ಮ ಕಾರ್ಯಪ್ರಗತಿಯ ವಿವರಗಳನ್ನು ಜಾಹಿರಾತು ಮೂಲಕ ಪ್ರಕಟಿಸಿದ್ದಲ್ಲಿ ಉತ್ತಮ ಪ್ರಚಾರ ಪಡೆದುಕೊಳ್ಳಲು ಸಾಧ್ಯವಿದೆ. ಈ ನಿಟ್ಟಿನಲ್ಲಿ ಪತ್ತಿನ ಸಹಕಾರ ಸಂಘಗಳ ಮಹಾಮಂಡಳವು ರಿಯಾಯಿತಿ ದರದಲ್ಲಿ ಜಾಹಿರಾತುಗಳನ್ನು ಪ್ರಕಟಿಸಲು ಉತ್ಸುಕವಾಗಿದೆ. ಸಹಕಾರ ಸಂಸ್ಥೆಗಳು ಸಂಪೂರ್ಣ ಮಾಹಿತಿಗಳೊಂದಿಗೆ ಜಾಹಿರಾತುಗಳನ್ನು ನೀಡಲು ಕೋರಿದೆ. ಜಾಹಿರಾತು ದರಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ದೂರವಾಣಿ ಹಾಗೂ ಮೊಬೈಲ್ ಸಂಖ್ಯೆಗಳಿಗೆ ಸಂಪರ್ಕಿಸಲು ಕೋರಿದೆ.

ಮೊಬೈಲ್ ನಂ. 9008407988, ದೂರವಾಣಿ : 080 23564444, 23464033, 23464034

ಇ–ಮೇಲ್ : ksccsfltd@gmail.com, info@ksccsf.org, ವೆಬ್‌ಸೈಟ್ : www.ksccsf.org

## ಸಹಕಾರ ವಾರ್ತಾ ಪತ್ರಿಕೆಗೆ ಚಂದಾದಾರರಾಗಲು ಮನವಿ

ಕರ್ನಾಟಕ ಸಹಕಾರ ಪತ್ತಿನ ಸಂಘಗಳ ಮಹಾಮಂಡಳವು ಪ್ರಕಟಿಸುತ್ತಿರುವ ಮಾಸಿಕ ಸಹಕಾರ ವಾರ್ತಾ ಪತ್ರಿಕೆಗೆ ಈಗಾಗಲೇ ಚಂದಾದಾರರಾಗಿರುವ ಸದಸ್ಯ ಸಹಕಾರ ಸಂಘಗಳನ್ನು ಹೊರತುಪಡಿಸಿ ಇನ್ನುಳಿದ ಪತ್ತಿನ ಸಹಕಾರ ಸಂಘಗಳು "ಸಹಕಾರ ಮಾಸಿಕ ವಾರ್ತಾ ಪತ್ರಿಕೆ"ಗೆ ಚಂದಾದಾರರಾಗಲು ಈ ಮೂಲಕ ಮನವಿ ಮಾಡಲಾಗಿದೆ.

– ಸಂಪಾದಕರು

# ಸಂಪಾದಕೀಯ



**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**
ಅಧ್ಯಕ್ಷರು

ಸಹಕಾರ ಕ್ಷೇತ್ರ ನಿಂತಿರುವುದೇ ನಂಬಿಕೆ, ವಿಶ್ವಾಸಾರ್ಹತೆ ಮೇಲೆ, ಆಡಳಿತಮಂಡಳಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರು ಬದ್ದತೆ, ದಕ್ಷತೆ, ಶಿಸ್ತಿನಿಂದ ಕಾರ್ಯನಿರ್ವಹಿಸಿದರೆ ಯಶಸ್ಸು ಸಾಧ್ಯ. ಈ ನಿಟ್ಟಿನಲ್ಲಿ ಬಹುತೇಕ ಸಹಕಾರ ಸಂಸ್ಥೆಗಳು ಕ್ರಿಯಾಶೀಲವಾಗಿ ಸದಸ್ಯರು, ಗ್ರಾಹಕರ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಸುದ್ದಿ ಮಾಧ್ಯಮಗಳ ವರದಿಗಳ ಬಗ್ಗೆ ನಮಗೆಲ್ಲ ಗೌರವ ಭಾವನೆ ಇದೆ. ಯಾವುದೇ ಸಹಕಾರ ಸಂಘ ತಪ್ಪೆಸಗಿರುವುದು ತನಿಖೆಯಿಂದ ದೃಢಪಟ್ಟಲ್ಲಿ ಅಂಥ ಸಂಸ್ಥೆಗಳ ಬಗ್ಗೆ ಪ್ರಸಾರ ಮಾಡಿ ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಲಿ. ಆದರೆ, ಒಟ್ಟಾರೆ ಸಹಕಾರ ಕ್ಷೇತ್ರದ ಬಗ್ಗೆಯಾಗಲಿ, ಹಲವು ಕಾರಣಗಳಿಂದ ನಷ್ಟಕ್ಕೆ ಬಂದ ಸಹಕಾರ ಸಂಸ್ಥೆಗಳ ಬಗ್ಗೆ ಸುದ್ದಿಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಇಲಾಖೆಯ ಮುಖ್ಯಸ್ಥರುಗಳಿಂದ ಅಧಿಕೃತ ಮಾಹಿತಿ ಪಡೆದು ಪ್ರಕಟಿಸಲಿ ಎಂಬುದು ಎಲ್ಲಾ ಸಹಕಾರಿಗಳ ಆಶಯವಾಗಿದೆ.

## ಶೋಷಿತರು, ಅಬಲದ ಧ್ವನಿಯಾಗಿರುವ ಸಹಕಾರ ಕ್ಷೇತ್ರದ ಬಗ್ಗೆ ಅಪಪ್ರಚಾರ ಬೇಡ

"ಒಬ್ಬರು ಎಲ್ಲರಿಗಾಗಿ, ಎಲ್ಲರೂ ಒಬ್ಬರಿಗಾಗಿ" ಎಂಬ ಪರಸ್ಪರ ಸಹಾಯದ ತತ್ವದಡಿ ಕಾರ್ಯನಿರ್ವಹಿಸುತ್ತಿರುವ ಸಹಕಾರ ಸಂಘ/ಬ್ಯಾಂಕುಗಳ ಬಗ್ಗೆ ಆಗಾಗ್ಗೆ ಮಾಧ್ಯಮಗಳಲ್ಲಿ ಸಂದೇಹಕ್ಕೆ ಆಸ್ಪದ ನೀಡುವ, ಜನರನ್ನು ದಿಕ್ಕು ತಪ್ಪಿಸುವ ವರದಿಗಳು ಪ್ರಕಟವಾಗುತ್ತಿವೆ.

ಸಹಕಾರ ಕ್ಷೇತ್ರ ಪ್ರಾರಂಭವಾದದ್ದೇ ಆರ್ಥಿಕವಾಗಿ ಶೋಷಿತರಾದ ಜನರ ಜನರುಗಳನ್ನು ಸ್ವಾವಲಂಬಿಗಳಾಗಿಸಲು, ಕೆಲವು ಸಹಕಾರ ಸಂಘಗಳು ಹಲವು ಕಾರಣಗಳಿಂದ ನಷ್ಟಕ್ಕೆ ಬರುವುದು ಸಹಜ. ಯಾವುದೋ ಒಂದೆರಡು ಸಂಸ್ಥೆಗಳಲ್ಲಿ ಆಡಳಿತ ದಿಕ್ಕು ತಪ್ಪಿದ ಕಾರಣಕ್ಕೆ ಸಹಕಾರ ಕ್ಷೇತ್ರವನ್ನು ಟೀಕಿಸುವುದು ಸರಿಯಲ್ಲ.

ಅತಿವೃಷ್ಠಿ, ಅನಾವೃಷ್ಠಿ, ಕೋವಿಡ್-19ರ ಸಂದರ್ಭಗಳಲ್ಲಿ ಕೆಲವು ಸಹಕಾರ ಸಂಘ/ಬ್ಯಾಂಕುಗಳು ಹಿನ್ನೆಡೆ ಅನುಭವಿಸಿದ್ದರೂ ಅದು ತಾತ್ಕಾಲಿಕ ಹಿನ್ನಡೆ ಮಾತ್ರ, ಉಳಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪರಿಸ್ಥಿಯನ್ನು ಅವಲೋಕಿಸಿ ಸಹಕಾರ ಸಂಸ್ಥೆಗಳ ನೆರವಿಗೆ ಬಂದು ಸಾರ್ವಜನಿಕ ಠೇವಣಿ ಹಣಕ್ಕೆ ಭದ್ರತೆ ನೀಡುವಂತಹ ಕೆಲಸಗಳು ಆಗಿವೆ.

ಸಹಕಾರ ಕ್ಷೇತ್ರ ನಿಂತಿರುವುದೇ ನಂಬಿಕೆ, ವಿಶ್ವಾಸಾರ್ಹತೆ ಮೇಲೆ, ಆಡಳಿತಮಂಡಳಿಗಳು, ಅಧಿಕಾರಿ/ಸಿಬ್ಬಂದಿ ವರ್ಗದವರು ಬದ್ದತೆ, ದಕ್ಷತೆ, ಶಿಸ್ತಿನಿಂದ ಕಾರ್ಯನಿರ್ವಹಿಸಿದರೆ ಯಶಸ್ಸು ಸಾಧ್ಯ. ಈ ನಿಟ್ಟಿನಲ್ಲಿ ಬಹುತೇಕ ಸಹಕಾರ ಸಂಸ್ಥೆಗಳು ಕ್ರಿಯಾಶೀಲವಾಗಿ ಸದಸ್ಯರು, ಗ್ರಾಹಕರ ಸೇವೆಯಲ್ಲಿ ತೊಡಗಿಸಿಕೊಂಡಿವೆ. ಸುದ್ದಿ ಮಾಧ್ಯಮಗಳ ವರದಿಗಳ ಬಗ್ಗೆ ನಮಗೆಲ್ಲ ಗೌರವ ಭಾವನೆ ಇದೆ. ಯಾವುದೇ ಸಹಕಾರ ಸಂಘ ತಪ್ಪೆಸಗಿರುವುದು ತನಿಖೆಯಿಂದ ದೃಢಪಟ್ಟಲ್ಲಿ ಅಂಥ ಸಂಸ್ಥೆಗಳ ಬಗ್ಗೆ ಪ್ರಸಾರ ಮಾಡಿ ಜನರಲ್ಲಿ ಜಾಗೃತಿ ಮೂಡಿಸುವಂತಹ ಕೆಲಸ ಮಾಡಲಿ. ಆದರೆ, ಒಟ್ಟಾರೆ ಸಹಕಾರ ಕ್ಷೇತ್ರದ ಬಗ್ಗೆಯಾಗಲಿ, ಹಲವು ಕಾರಣಗಳಿಂದ ನಷ್ಟಕ್ಕೆ ಬಂದ ಸಹಕಾರ ಸಂಸ್ಥೆಗಳ ಬಗ್ಗೆ ಸುದ್ದಿಗಳನ್ನು ಪ್ರಕಟಿಸುವ ಸಂದರ್ಭದಲ್ಲಿ ಇಲಾಖೆಯ ಮುಖ್ಯಸ್ಥರುಗಳಿಂದ ಅಧಿಕೃತ ಮಾಹಿತಿ ಪಡೆದು ಪ್ರಕಟಿಸಲಿ ಎಂಬುದು ಎಲ್ಲಾ ಸಹಕಾರಿಗಳ ಆಶಯವಾಗಿದೆ.

ಸಹಕಾರ ಸಂಸ್ಥೆಗಳು ಕೂಡ ಕ್ರಿಯಾಶೀಲ ಸೇವೆ ಮಾಡುತ್ತಿವೆ. ಲಾಭದಲ್ಲಿರುವ ಸಹಸ್ರಾರು ಸಂಘಗಳ ಬಗ್ಗೆ ಮಾದ್ಯಮಗಳು ಯಶೋಗಾಥೆಗಳನ್ನು ಪ್ರಕಟಿಸಿ ಜನರಲ್ಲಿ ಸಹಕಾರ ಕ್ಷೇತ್ರದ ಬಗ್ಗೆ ವಿಶ್ವಾಸ ಹೆಚ್ಚಿಸಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸಹಕಾರ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳಲು ಪ್ರೇರಣೆಯಾಗಲಿ. ಈ ನಿಟ್ಟಿನಲ್ಲಿ ಸಹಕಾರ ಸಂಸ್ಥೆಗಳೂ ಕೂಡ ಎಚ್ಚೆತ್ತುಕೊಂಡು ಪಾರದರ್ಶಕ ಆಡಳಿತ ನೀಡಲಿ, ಕೋಟ್ಯಂತರ ಜನರಿಗೆ ಸೌಲಭ್ಯಗಳನ್ನು ವಿತರಿಸುವ ಮೂಲಕ ಅವರನ್ನು ಸ್ವಾವಲಂಭಿಳನ್ನಾಗಿಸುವಲ್ಲಿ ಭವಿಷ್ಯದ ಯೋಜನೆಗಳನ್ನು ರೂಪಿಸಿಕೊಂಡು ಮುನ್ನಡೆ ಸಾಧಿಸಲಿ ಎಂದು ನಾನು ಮನವಿ ಮಾಡುತ್ತೇನೆ.

ಪ್ರತಿವರ್ಷ ಮಾರ್ಚ್-8ರಂದು ಅಂತರಾಷ್ಟ್ರೀಯ ಮಹಿಳಾ ದಿನ ಎಂದು ಆಚರಿಸಲಾಗುತ್ತಿದೆ. ಮಹಿಳೆಯರು ಇಂದು ಎಲ್ಲಾ ಕ್ಷೇತಗಳಲ್ಲಿ ತೊಡಗಿಸಿಕೊಂಡು ಉತ್ತಮ ಜೀವನ ನಿರ್ವಹಣೆಯ ಮೂಲಕ ಮಾದರಿ ಕುಟುಂಬಗಳನ್ನಾಗಿ ಮಾಡುವಲ್ಲಿ ದೇಶದ ಆರ್ಥಿಕತೆಗೂ ಕೊಡುಗೆ ನೀಡಿ ದೇಶಕಟ್ಟುವ ಕೆಲಸ ಮಾಡುತ್ತಿದ್ದಾರೆ. ಎಲ್ಲಾ ಮಹಿಳಾ ಸಹೋದರಿಯರಿಗೆ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳು.

ಪತ್ತಿನ ಸಹಕಾರ ಚಳವಳಿ, ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಮೀಸಲಾದ ಏಕಮಾತ್ರ ಕನ್ನಡ ಮಾಸಪತ್ರಿಕೆ

# ಸಹಕಾರ

ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ಪ್ರಕಟಣೆ

**ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು**

ನಂ. 16, 1ನೇ ಮಹಡಿ, 1ನೇ ಅಡ್ಡರಸ್ತೆ, ಲಿಂಕ್‌ರಸ್ತೆ,
ಮಲ್ಲೇಶ್ವರಂ, ಬೆಂಗಳೂರು – 560003
ದೂರವಾಣಿ ಸಂಖ್ಯೆ :
080–23564444 / 23464033 / 23464034
ಇ–ಮೇಲ್ : info@ksccsf.org
ksccsfltd@gmail.com, ವೆಬ್ : www.ksccsf.org

**ಸಂಪಾದಕ ಮಂಡಳಿ**

ಅಧ್ಯಕ್ಷರು / ಪ್ರಧಾನ ಸಂಪಾದಕರು :
**ಶ್ರೀಮತಿ ಕೆ. ಲಲಿತ ಜಿ.ಟಿ. ದೇವೇಗೌಡ**

ಉಪಸಂಪಾದಕರು :
**ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್ ಗೌಡ**

ಸದಸ್ಯರು :
**ಶ್ರೀ ಕೆ. ಕೃಷ್ಣಮೂರ್ತಿ, ಶ್ರೀ ಜಿ. ಮಲ್ಲಿಕಾರ್ಜುನಯ್ಯ**
**ಶ್ರೀ ಹೆಚ್.ಟಿ. ನಾಗೇಶ್, ಶ್ರೀ ಚಿತ್ತರಂಜನ್ ಬೋಳಾರ್**

ಸಂಪಾದಕರು : **ಶ್ರೀ ಕೆ.ಎಸ್. ಗುರುಪ್ರಸಾದ್**

**ಶ್ರೀಮತಿ ಪಿ. ಆಶಾಲತಾ**
ಮುಖ್ಯಕಾರ್ಯನಿರ್ವಹಣಾಧಿಕಾರಿ (ಪ್ರಭಾರ)





## ಪತ್ತಿನ ಮಹಾಮಂಡಳದ ಉಪಾಧ್ಯಕ್ಷರಾಗಿ ಶ್ರೀ ಕೆ.ಕೆ. ಮಹೇಂದ್ರ ಪ್ರಸಾದ್‌ಗೌಡರವರು ಅವಿರೋಧವಾಗಿ ಆಯ್ಕೆ

**ಬೆಂಗಳೂರು :** ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳದ ನೂತನ ಉಪಾಧ್ಯಕ್ಷರಾಗಿ ಶ್ರೀ ಕೆ.ಕೆ.ಮಹೇಂದ್ರ ಪ್ರಸಾದ್‌ಗೌಡರವರು ಅವಿರೋಧವಾಗಿ ಆಯ್ಕೆಯಾದರು. ಶ್ರೀಯುತರವರನ್ನು ಮಹಾಮಂಡಳದ ಅಧ್ಯಕ್ಷರಾದ ಶ್ರೀಮತಿ ಕೆ.ಲಲಿತ ಜಿ.ಟಿ.ದೇವೇಗೌಡರವರು ಮತ್ತು ಆಡಳಿತಮಂಡಳಿ ಸದಸ್ಯರು ಹಾಗೂ ಸಿಬ್ಬಂದಿವರ್ಗದವರು ಅಭಿನಂದಿಸಿ ಶುಭ ಕೋರಿದರು.

**ಸುಭಾಷಿತ :** ಸುಮ್ಮನೆ ಕೂಗಾಡಬೇಡಿ, ಏನು ಹೇಳಬೇಕೆಂದಿದೆಯೋ ಅದನ್ನು ಸ್ಪಷ್ಟವಾಗಿ ಹೇಳಿ. ಹೂವನ್ನು ಮಳೆಯು ಅರಳಿಸಬಲ್ಲದೇ ಹೊರತು ಗುಡುಗಲ್ಲ. – ಜಲಾಲುದ್ದೀನ್ ಮಹಮ್ಮದ್ ರೂಮಿ

ಸಹಕಾರ ವಾರ್ತಾ ಪತ್ರಿಕೆ ಚಂದಾದಾರರಾಗ ಬಯಸುವವರು ಚಂದಾ ಹಣವನ್ನು "ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕರ್ನಾಟಕ ರಾಜ್ಯ ಸಹಕಾರ ಪತ್ತಿನ ಸಂಘಗಳ ಮಹಾಮಂಡಳ ನಿ., ಬೆಂಗಳೂರು" ಇವರ ಹೆಸರಿಗೆ ಚೆಕ್ ಅಥವಾ ಡಿಡಿಯನ್ನು ಬರೆದು ಕಳುಹಿಸಬೇಕಾಗಿ ವಿನಂತಿ. - ಸಿ.ಇ.ಒ.
ಐದು ವರ್ಷಗಳ ಚಂದಾ: ರೂ : 1500/-

**ಸೂಚನೆ :**
ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅನಿಸಿಕೆ, ಅಭಿಪ್ರಾಯಗಳು ಆಯಾ ಬರಹಗಾರರದೇ ಆಗಿರುತ್ತದೆ ವಿನಃ ಪತ್ರಿಕೆ / ಮಹಾಮಂಡಳದ ವಿಚಾರಗಳಾಗಿರುವುದಿಲ್ಲ.
- ಸಂಪಾದಕರು,
ಸಹಕಾರ ವಾರ್ತಾ ಪತ್ರಿಕೆ.

# ಸ್ವಾವಲಂಬಿ ಭಾರತ ಪರಿಕಲ್ಪನೆಗೆ ಪೂರಕ ಕ್ರಮ




ಕೊರೊನಾ ಸಾಂಕ್ರಾಮಿಕ ಪಿಡುಗು ತಂದೊಡ್ಡಿದ ಆರ್ಥಿಕ ಸಂಕಷ್ಟದ ಸುಳಿಯಿಂದ ದೇಶವನ್ನು ಪಾರು ಮಾಡುವಲ್ಲಿ ಕೃಷಿ ಹಾಗೂ ಸಂಬಂಧಿತ ಕ್ಷೇತ್ರ ನಿರ್ಣಾಯಕಪಾತ್ರವಹಿಸಿದೆ. 'ಕೃಷಿ ಉನ್ನತಿಯೇ ಆರ್ಥಿಕತೆಯ ಜೀವಾಳ' ವೆಂದು ಹಣಕಾಸು ಮಂತ್ರಿ ನಿರ್ಮಲಾ ಸೀತಾರಾಮನ್ 2022–23ನೇ ಸಾಲಿನ ಮುಂಗಡಪತ್ರದಲ್ಲಿ ಸಾರಿದ್ದಾರೆ.

"ಸ್ವಾವಲಂಭಿ ಭಾರತ" ಸಾಕಾರಗೊಳಿಸುವ ನಿಟ್ಟಿನಲ್ಲಿ ಆಹಾರಭದ್ರತೆ, ವಿದೇಶಗಳಿಗೂ ರಫ್ತು, ಖಾದ್ಯ ತೈಲ ಆಮದು ಕಡಿತ, ಅನ್ನದಾತರ ಬದುಕು ಸಮೃದ್ಧಿಗೊಳಿಸುವ ಜತೆಗೆ ಪರಿಸರಸ್ನೇಹಿ, ಗುಣಮಟ್ಟದ ಆಹಾರ ಪದಾರ್ಥಗಳ ಉತ್ಪಾದನೆಗೆ ಪ್ರಾಶಸ್ತ್ಯ ನೀಡಲಾಗಿದೆ. ಸ್ಥಳೀಯವಾಗಿ ಎಣ್ಣೆಕಾಳು ಬೆಳೆಯುವುದಕ್ಕೆ ಉತ್ತೇಜಿಸಲು ಸಮಗ್ರ ಯೋಜನೆ ರೂಪಿಸಲಾಗಿದೆ. ಆ ಮೂಲಕ ಆಮದು ಖಾದ್ಯತೈಲದ ಮೇಲಿನ ಅವಲಂಬನೆಗೆ ಕ್ರಮೇಣ ತಗ್ಗಿಸಲು ಉದ್ದೇಶಿಸಲಾಗಿದೆ. ಅರಣ್ಯ ಕೃಷಿಗೆ ಮುಂದಾಗುವ ಪರಿಶಿಷ್ಟ ಜಾತಿ ಮತ್ತು ಪಂಗಡದ ರೈತರಿಗೆ ಆರ್ಥಿಕ ನೆರವು ಘೋಷಣೆಯಾಗಿದೆ.

ಸಾವಯವ ಕೃಷಿ, ಶೂನ್ಯ ಬಂಡವಾಳ ಅಥವಾ ಸಹಜ ಕೃಷಿಗೆ ಸರ್ಕಾರ ಗಮನ ನೀಡಿದೆ. ಇದರಿಂದ ಕೃಷಿ ಭೂಮಿಯ ಫಲವತ್ತತೆ ಉಳಿದು, ಉತ್ಪಾದನಾ ವೆಚ್ಚ ಕಡಿತವಾಗಲಿದೆ. ರಸಗೊಬ್ಬರ ಮತ್ತು ಕ್ರಿಮಿನಾಶಕ ಬಳಕೆ ಕಡಿಮೆ ಮಾಡುವುದರಿಂದ ಪರಿಸರ ಸಂರಕ್ಷಣೆ ಸಾಧ್ಯ ಎನ್ನುವುದು ಕೇಂದ್ರದ ನಿಚ್ಚಳ ನಿಲುವು. ನಿರೀಕ್ಷಿತ ಪ್ರಗತಿ ಸಾಧಿಸುವ ನಿಟ್ಟಿನಲ್ಲಿ ಆಧುನಿಕ ಕೃಷಿ, ಮೌಲ್ಯವರ್ಧನೆ ಮತ್ತು ನಿರ್ವಹಣೆ, ಸಹಜ/ಶೂನ್ಯ ಬಂಡವಾಳ ಮತ್ತು (ಸಾವಯವ ಕೃಷಿಗೆ ಪ್ರೋತ್ಸಾಹಿಸುವುದಕ್ಕೆ ಪಠ್ಯಕ್ರಮ ಪರಿಷ್ಕರಿಸಬೇಕು ಎಂದು ಎಲ್ಲ ರಾಜ್ಯಗಳ ಕೃಷಿ ವಿಶ್ವವಿದ್ಯಾಲಯಗಳಿಗೆ ಸೂಚಿಸಲಾಗಿದೆ. ರೈತರ ಜಮೀನಿನ ಫಲವತ್ತತೆ ಸಂರಕ್ಷಣೆ ಮತ್ತು ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿಗೆ ಪ್ರೋತ್ಸಾಹ ನೀಡುವ ಭಾಗವಾಗಿ ಮೊದಲ ಹಂತದಲ್ಲಿ ಗಂಗಾ ನದಿತೀರದಲ್ಲಿ ಐದು ಕಿ.ಮೀ. ಉದ್ದಗಲದ ಕಾರಿಡಾರ್ ನಿರ್ಮಿಸಲು ತೀರ್ಮಾನಿಸಲಾಗಿದೆ.

ಜಲ ಸಂಪನ್ಮೂಲ ಸದ್ಬಳಕೆಗೆ ನದಿಗಳ ಜೋಡಣೆಗೆ ಸರ್ಕಾರ ಸಮ್ಮತಿಸಿದೆ. ಪ್ರತಿ ಹನಿ ನೀರು ಸದ್ಬಳಕೆ, ಭೂಮಿ ಫಲವತ್ತತೆ ಸಂರಕ್ಷಣೆ, 'ಚಲ್ ಕ್ಲಾಪ್ ಮೋರ್ ಕ್ಲಾಪ್' ಎಂಬ ಘೋಷವಾಕ್ಯದ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆ ಮುಂದುವರಿಸಲಾಗಿದೆ. ಕೃಷಿ, ತೋಟಗಾರಿಕೆ, ಮೀನುಗಾರಿಕೆ ಇತ್ಯಾದಿ ಸಂಬಂಧಿತ ಚಟುವಟಿಕೆಗಳನ್ನು ಒಳಗೊಂಡ 'ಕಿಸಾನ್ ಉನ್ನತಿ ಯೋಜನೆ'ಗೆ ಈ ಭಾರಿ 7,183 ಕೋಟಿ ರೂ. ಅನುದಾನ ಒದಗಿಸಿದೆ. ಕೃಷಿ ಆಧುನೀಕರಣ, ಯಾಂತ್ರೀಕರಣ, ಕೊಯ್ಲೋತ್ತರ ತಂತ್ರಜ್ಞಾನ, ಮೌಲ್ಯವರ್ಧನೆ, ಮಾರ್ಕೆಟಿಂಗ್ ನೈಪುಣ್ಯ ಸಾಧಿಸುವುದಕ್ಕಾಗಿ ಡಿಜಿಟಲ್ ಸ್ಪರ್ಶ ನೀಡಲು ಕೇಂದ್ರ ನಿರ್ಧರಿಸಿದೆ. ನಬಾರ್ಡ್ ನೆರವಿನಡಿ ಸಂಯೋಜಿತ ಬಂಡವಾಳ ಹೂಡಿಕೆ, ಕೃಷಿ ಮತ್ತು ಗ್ರಾಮೀಣ ಆಧಾರಿತ ನವೋದ್ಯಮಗಳಿಗೆ ಹಣಕಾಸಿನ ಬೆಂಬಲ, ಸಕಾಲಿಕ ಕೃಷಿ ಉತ್ಪನ್ನಗಳ ಮೌಲ್ಯವೃದ್ಧಿ ಬೆಸೆಯುವುದು, ರೈತ ಉತ್ಪಾದಕ ಸಂಸ್ಥೆಗಳ ತೊಡಗಿಸುವಿಕೆ, ಯಂತ್ರೋಪಕರಣಗಳ ಬಾಡಿಗೆ, ಮಾಹಿತಿ ತಂತ್ರಜ್ಞಾನ ಆಧಾರಿತ ಉನ್ನತ ತಂತ್ರಜ್ಞಾನದ ಸ್ಪರ್ಶ ನೀಡಲು ಬಯಸಿದೆ.

# ವರ್ಚುವಲ್ ಸಮಾರಂಭದ ಮೂಲಕ 100 ಕಿಸಾನ್ ಡ್ರೋನ್‌ಗಳಿಗೆ ಚಾಲನೆ ನೀಡಿದ ಪ್ರಧಾನಿ ನರೇಂದ್ರ ಮೋದಿ

**ನವದೆಹಲಿ** : ಕೀಟನಾಶಕಗಳನ್ನು ಸಿಂಪಡಿಸಲು ಅಥವಾ ಮಾರುಕಟ್ಟೆಗಳಿಗೆ ಕೃಷಿ ಉತ್ಪನ್ನಗಳನ್ನು ಸಾಗಿಸುವ ಉದ್ದೇಶದ 100 ಡ್ರೋನ್‌ಗಳಿಗೆ ವಿವಿಧ ನಗರಗಳಲ್ಲಿ ಪ್ರಧಾನಿ ನರೇಂದ್ರ ಮೋದಿ ಫೆ.19 ರಂದು ಚಾಲನೆ ನೀಡಿದರು.




ಕೃಷಿ ಕ್ಷೇತ್ರಕ್ಕೆ 'ಕಿಸಾನ್ ಡ್ರೋನ್'ಗಳನ್ನು ಪರಿಚಯಿಸುವುದಾಗಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಘೋಷಿಸಿದ್ದರು. ಮಾನೇಸರ್‌ನಲ್ಲಿ ಆಯೋಜಿಸಲಾದ ವರ್ಚುವಲ್ ಸಮಾರಂಭದಲ್ಲಿ ಭಾಗವಹಿಸಿದ ಪ್ರಧಾನಿ ಮೋದಿ, ಈಗಾಗಲೇ ಡ್ರೋನ್‌ಗಳನ್ನು ಬಳಸುತ್ತಿರುವ ವಿವಿಧ ಕ್ಷೇತ್ರಗಳನ್ನು ಭಾಷಣದಲ್ಲಿ ಉಲ್ಲೇಖಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಪ್ರಧಾನಿ, "21ನೇ ಶತಮಾನದ ಆಧುನಿಕ ಕೃಷಿ ಸೌಲಭ್ಯಗಳ ದಿಕ್ಕಿನಲ್ಲಿ ಇದು ಹೊಸ ಅಧ್ಯಾಯವಾಗಿದೆ. ಈ ಆರಂಭವು ಡ್ರೋನ್ ಕ್ಷೇತ್ರದ ಅಭಿವೃದ್ಧಿಯಲ್ಲಿ ಒಂದು ಮೈಲಿಗಲ್ಲು ಎಂದು ಸಾಬೀತುಪಡಿಸುತ್ತದೆ ಎಂದು ನನಗೆ ವಿಶ್ವಾಸವಿದೆ. ಅನಿಯಮಿತ ಸಾಧ್ಯತೆಗಳಿಗೆ ಆಕಾಶವನ್ನು ಸಹ ತೆರೆಯುತ್ತದೆ."

2022–23ರ ಆರ್ಥಿಕ ವರ್ಷದಲ್ಲಿ ದೇಶದಾದ್ಯಂತ ರೈತರಿಗೆ ಡಿಜಿಟಲ್ ಮತ್ತು ಹೈಟೆಕ್ ಸೇವೆಗಳನ್ನು ತಲುಪಿಸಲು ಕೇಂದ್ರವು ಕಿಸಾನ್ ಡ್ರೋನ್‌ಗಳು, ರಾಸಾಯನಿಕ ಮುಕ್ತ ನೈಸರ್ಗಿಕ ಕೃಷಿ, ಸಾರ್ವಜನಿಕ–ಖಾಸಗಿ ಸಹಭಾಗಿತ್ವವನ್ನು ಉತ್ತೇಜಿಸುತ್ತದೆ ಎಂದು ಹೇಳಿದರು.

ತಂತ್ರಜ್ಞಾನದ ಬಳಕೆಗೆ ಒತ್ತು ನೀಡಿದ ಅವರು, ಬೆಳೆ ಮೌಲ್ಯಮಾಪನ, ಭೂ ದಾಖಲೆಗಳ ಡಿಜಿಟಲೀಕರಣ ಮತ್ತು ಕೀಟನಾಶಕಗಳು ಮತ್ತು ಪೋಷಕಾಂಶಗಳ ಸಿಂಪಡಣೆಗಾಗಿ ಕಿಸಾನ್ ಡ್ರೋನ್‌ಗಳನ್ನು ಉತ್ತೇಜಿಸಲಾಗುವುದು ಎಂದು ಹೇಳಿದರು.

'ಸ್ವಾಮಿತ್ವ' ಯೋಜನೆಯ ಅಡಿಯಲ್ಲಿ ಭೂ ದಾಖಲೆಗಳನ್ನು ಸಮೀಕ್ಷೆ ಮಾಡಿ ಮತ್ತು ದಾಖಲೀಕರಣ ಮಾಡಲಾಗುತ್ತದೆ. ದೂರದ ಪ್ರದೇಶಗಳಿಗೆ ಡ್ರೋನ್ ಮೂಲಕ ಔಷಧಿಗಳು, ಲಸಿಕೆಗಳನ್ನು ಪೂರೈಸಲಾಗುತ್ತದೆ ಎಂದು ಅವರು ತಿಳಿಸಿದರು.

'ಡ್ರೋನ್‌ಗಳ ಮೂಲಕ ರಸಗೊಬ್ಬರಗಳ ಸಿಂಪಡಣೆಯನ್ನು ಸಹ ಮಾಡಲಾಗುತ್ತಿದೆ. 'ಕಿಸಾನ್ ಡ್ರೋನ್‌ಗಳು' ಹೊಸ ಯುಗದ ಕ್ರಾಂತಿಯಾಗಲಿವೆ. ಶೀಘ್ರದಲ್ಲೇ, ಹೆಚ್ಚಿನ ಸಾಮರ್ಥ್ಯದ ಡ್ರೋನ್‌ಗಳು ತಾಜಾ ತರಕಾರಿಗಳು, ಹಣ್ಣುಗಳು ಮತ್ತು ಹೂವುಗಳನ್ನು ನೇರವಾಗಿ ಮಾರುಕಟ್ಟೆಗೆ ತಲುಪಿಸಲು ರೈತರಿಗೆ ನೆರವಾಗಲಿವೆ. ಮೀನುಗಾರರು ತಾಜಾ ಮೀನುಗಳನ್ನು ಮಾರುಕಟ್ಟೆಗೆ ತಲುಪಿಸಬಹುದು' ಎಂದು ಮೋದಿ ತಿಳಿಸಿದರು.

'ಇಂತಹ ಸಾಕಷ್ಟು ಅವಕಾಶಗಳು ನಮ್ಮ ಬಾಗಿಲನ್ನು ತಟ್ಟುತ್ತಿವೆ. ದೇಶದ ಇತರ ಹಲವು ಕಂಪನಿಗಳು ಈ ದಿಕ್ಕಿನಲ್ಲಿ ಸಾಗುತ್ತಿರುವುದಕ್ಕೆ ನನಗೆ ಸಂತೋಷವಾಗಿದೆ' ಎಂದೂ ಮೋದಿ ಹರ್ಷ ವ್ಯಕ್ತಪಡಿಸಿದರು.

'ಭಾರತವು ಡ್ರೋನ್ ಸ್ಟಾರ್ಟ್‌ಅಪ್‌ಗಳಿಗಾಗಿ ಪೂರಕ ವ್ಯವಸ್ಥೆ ಹೊಂದಿವೆ. ಭಾರತವು ಈ ಕ್ಷೇತ್ರದಲ್ಲಿ ಜಗತ್ತನ್ನು ಮುನ್ನಡೆಸುತ್ತದೆ ಎಂದು ನನಗೆ ಖಚಿತವಾಗಿದೆ' ಎಂದೂ ಅವರು ಹೇಳಿದರು.

ಇದು ಡ್ರೋನ್ ವಲಯದಲ್ಲಿ ಹೊಸ ಮೈಲುಗಲ್ಲು ಮಾತ್ರವಲ್ಲ. ಹಲವು ಹೊಸ ಸಾಧ್ಯತೆಗಳನ್ನು ಇದು ಹುಟ್ಟುಹಾಕಿದೆ. 'ಗರುಡ್ ಏರೋಸ್ಪೇಸ್ ಮುಂದಿನ ಎರಡು ವರ್ಷಗಳಲ್ಲಿ 1 ಲಕ್ಷ ಡ್ರೋನ್‌ಗಳನ್ನು ತಯಾರಿಸಲು ನಿರ್ಧರಿಸಿದೆ. ಇದು ನೂರಾರು ಯುವಕರಿಗೆ ಉದ್ಯೋಗ ಮತ್ತು ಅವಕಾಶಗಳನ್ನು ನೀಡಲಿದೆ,' ಎಂದು ಅವರು ಹೇಳಿದರು.



# 3 ಸಾವಿರ ಹುದ್ದೆಗಳ ಭರ್ತಿಗೆ ಅಧಿಸೂಚನೆ : ಸಚಿವ ಎಸ್.ಟಿ. ಸೋಮಶೇಖರ್
## ಪಿರಿಯಾಪಟ್ಟಣದಲ್ಲಿ ಪಶು ಆಹಾರ ಉತ್ಪಾದನಾ ಘಟಕ ಆರಂಭಕ್ಕೆ ಒತ್ತು



**ಪಿರಿಯಾಪಟ್ಟಣ :** ಸಹಕಾರ ಇಲಾಖೆಯಲ್ಲಿ ಉದ್ಯೋಗದಲ್ಲಿ ಯುವಜನರಿಗೆ ಒತ್ತು ನೀಡಲಾಗುತ್ತಿದೆ. 5 ಸಾವಿರ ಜನರಿಗೆ ಉದ್ಯೋಗ ಕಲ್ಪಿಸುವ ಘೋಷಣೆ ಮಾಡಲಾಗಿದ್ದು ಈಗಾಗಲೇ 3 ಸಾವಿರ ಹುದ್ದೆಗಳ ಭರ್ತಿಗೆ ಅಧಿಸೂಚನೆ ಹೊರಡಿಸಲಾಗಿದೆ ಎಂದು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ.ಸೋಮಶೇಖರ್ ಹೇಳಿದರು. ಮೈಸೂರು ಡಿಸಿಸಿ ಬ್ಯಾಂಕ್ ಶಾಖೆಯ ಕಟ್ಟಡ ನಿರ್ಮಾಣ ಹಾಗೂ ನಂದಿನಿ ಮಿಲ್ಕ್ ಗ್ಯಾಲಕ್ಸಿ ಹಾಗೂ ನಂದಿನಿ ಕೆಫೆ ಶಂಕುಸ್ಥಾಪನೆ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಈ ಭಾಗದಲ್ಲಿ ಪಶು ಆಹಾರ ಉತ್ಪಾದನಾ ಘಟಕ ಆರಂಭಕ್ಕೆ ಸಂಬಂಧಿಸಿದಂತೆ ಕೆಎಂಎಫ್ ವ್ಯವಸ್ಥಾಪಕರಿಗೆ ಮಾತನಾಡಲಾಗಿದೆ ಎಂದರು.

ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯ ಡಿಸಿಸಿ ಬ್ಯಾಂಕ್, ರೈತರಿಗೆ ಸೂಕ್ತ ರೀತಿಯಲ್ಲಿ ಸಾಲ ಸೌಲಭ್ಯಗಳನ್ನು ನೀಡುವ ಮೂಲಕ ರಾಜ್ಯದಲ್ಲಿ ನಂಬರ್ ಒನ್ ಸ್ಥಾನಕ್ಕೇರಿದೆ. ಮೈಸೂರು ಡಿಸಿಸಿ ಬ್ಯಾಂಕ್ ನಷ್ಟದಲ್ಲಿತ್ತು. ಎಲ್ಲಾ ನಿರ್ದೇಶಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ರೈತರ ಕಷ್ಟಸುಖಗಳಿಗೆ ಸ್ಪಂದಿಸಬೇಕೆಂಬ ಪ್ರಾಮಾಣಿಕ ಪ್ರಯತ್ನದ ಫಲವಾಗಿ ಮೈಸೂರು ಡಿಸಿಸಿ ಬ್ಯಾಂಕ್ ರಾಜ್ಯದಲ್ಲಿ ನಂಬರ್ ಒನ್ ಸ್ಥಾನಕ್ಕೇರುವಂತಾಗಿದೆ ಎಂದು ಹೇಳಿದರು.

ಮೈಸೂರು ಡಿಸಿಸಿ ಬ್ಯಾಂಕ್ ನಿಗದಿತ ಗುರಿಯಲ್ಲಿ 80% ಸಾಲ ನೀಡಿದೆ. ಮಾರ್ಚ್‌ಗೆ ನೂರರಷ್ಟು ಗುರಿ ತಲುಪಲಿದೆ. ಹಾಲು ಉತ್ಪಾದಕರ ಸಹಕಾರ ಸಂಘಗಳು ಉತ್ತಮ ಕಾರ್ಯನಿರ್ವಹಿಸುತ್ತಿವೆ. ದೇಶ–ವಿದೇಶಗಳ ನಾನಾ ಭಾಗಗಳಿಗೆ ನಂದಿನಿ ತುಪ್ಪ ಪೂರೈಕೆಯಾಗುತ್ತದೆ. ನಂದಿನಿ ಹಾಲು ಕೂಡ ಅನ್ಯ ರಾಜ್ಯಗಳಿಗೆ ಹೋಗುತ್ತದೆ.

ಹೀಗಾಗಿ ನಂದಿನಿ ಬ್ರ್ಯಾಂಡ್‌ಗೆ ಕಳಂಕ ತರುವವರು, ನಕಲಿ ಮಾಡುವವರ ವಿರುದ್ಧ ಕಠಿಣ ಕ್ರಮ ಕೈಗೊಳುವಂತೆ ಸೂಚಿಸಲಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಶಾಸಕ ಮಹದೇವಪ್ಪ, ಮೈಸೂರು ಡಿಸಿಸಿ ಬ್ಯಾಂಕ್ ಅಧ್ಯಕ್ಷ ಹರೀಶ್ ಗೌಡ, ಮೈಮೂಲ್ ಅಧ್ಯಕ್ಷ ಪ್ರಸನ್ನ ಸೇರಿದಂತೆ ನಾನಾ ಮುಖಂಡರು ಹಾಗೂ ಆಡಳಿತ ಮಂಡಳಿ ನಿರ್ದೇಶಕರು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.



# ಬಡವರಿಗೆ ಹೆಚ್ಚುವರಿ ಅಕ್ಕಿ; ಸರ್ಕಾರದ ಸಾಧನೆಗಳನ್ನು ಶ್ಲಾಘಿಸಿದ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್





ಕೋವಿಡ್, ಪ್ರವಾಹ ಪರಿಸ್ಥಿತಿಯನ್ನು ಸರ್ಕಾರ ಹೇಗೆ ನಿಭಾಯಿಸಿದೆ ಎಂಬುದನ್ನು ತಿಳಿಸಿದ್ದೇವೆ. ವಿವಿಧ ಕ್ಷೇತ್ರಗಳ ಪ್ರಗತಿಯ ಚಿತ್ರಣ ನೀಡಿದ್ದೇವೆ. ಇನ್ನೂ ಹಲವು ಇಲಾಖೆಗಳ ಪ್ರಗತಿಯನ್ನು ರಾಜ್ಯಪಾಲರ ಭಾಷಣದಲ್ಲಿ ತಿಳಿಸಿಲ್ಲ. ಉತ್ತರ ನೀಡುವ ಸಂದರ್ಭದಲ್ಲಿ ಉಳಿದ ಇಲಾಖೆಗಳ ಪ್ರಗತಿಯ ಚಿತ್ರಣವನ್ನು ನೀಡುತ್ತೇವೆ. ಪ್ರತಿಪಕ್ಷಗಳಿಗೆ ಹೇಳುವುದಕ್ಕೆ ಏನೇನೂ ಇಲ್ಲದೆ ಟೀಕಿಸುತ್ತಿವೆ.

– **ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

**ಬೆಂಗಳೂರು :** ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್‌ರವರು ಫೆಬ್ರವರಿ 14ರಂದು ಆರಂಭಗೊಂಡ 15ನೇ ವಿಧಾನ ಸಭೆಯ 12ನೇ ಅಧಿವೇಶನದಲ್ಲಿ ಕೋವಿಡ್ ನಿರ್ವಹಣೆ, ಆತ್ಮನಿರ್ಭರ ಭಾರತ ಅನುಷ್ಠಾನ ಸೇರಿದಂತೆ ಕಳೆದೊಂದು ವರ್ಷದ ಸರ್ಕಾರದ ಸಾಧನೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಅಧಿವೇಶನದಲ್ಲಿ ಕೊರೋನಾ ವಿಚಾರದಿಂದಲೇ ಮಾತು ಆರಂಭಿಸಿದ ರಾಜ್ಯಪಾಲರು, ನಮ್ಮ ಸರ್ಕಾರ ಕರೊನಾದಿಂದ ಉದ್ಭವಿಸಿದ ಕೆಟ್ಟ ಪರಿಣಾಮಗಳನ್ನು ನಿರ್ವಹಿಸಲು ಹಾಗೂ ನಿವಾರಿಸಲು ಅತ್ಯುತ್ತಮವಾಗಿ ಶ್ರಮಿಸಿದೆ. ಸವಾಲು, ಸಂಕಷ್ಟಗಳು ಇದ್ದಾಗಲೂ ಸಮರ್ಥವಾಗಿ ನಿರ್ವಹಿಸಿದೆ. ಸರ್ಕಾರದ ಮಧ್ಯಸ್ಥಿಕೆಯಿಂದ ರಾಜ್ಯದಲ್ಲಿ ಸಾವಿನ ಸಂಖ್ಯೆಯನ್ನು ಮೊಟಕು ಗೊಳಿಸಲು ಸಾಧ್ಯವಾಗಿದೆ ಎಂದು ತಿಳಿಸಿದರು.

ಪ್ರಧಾನಿ ನರೇಂದ್ರ ಮೋದಿಯವರ ದೂರದರ್ಶಿತ್ವದ 'ಆತ್ಮನಿರ್ಭರ ಭಾರತ' ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನಕ್ಕೆ ಶ್ರಮಿಸಲಾಗಿದೆ ಇದರಿಂದ ನಮ್ಮ ಸಾಮರ್ಥ್ಯ ವರ್ಧನೆ ಮತ್ತು ಆರೋಗ್ಯ ಮೂಲಸೌಕರ್ಯ ಹೆಚ್ಚಿಸಲು ಸಾಧ್ಯವಾಗಿದೆ ಎಂದು ರಾಜ್ಯಪಾಲರು ಹೇಳಿದರು. ಆದ್ಯತಾ ಪಡಿತರ ಚೀಟಿ ಹೊಂದಿದ ಪ್ರತಿ ಕುಟುಂಬಕ್ಕೆ 5 ಕೆ.ಜಿ. ಧಾನ್ಯವನ್ನು ಪ್ರತಿ ತಿಂಗಳು ಹಂಚಲಾಗುತ್ತಿದೆ, ಸರ್ಕಾರವು ಹೆಚ್ಚುವರಿಯಾಗಿ ಒಂದು ಕೆಜಿ ಅಕ್ಕಿಯನ್ನು ಉಚಿತವಾಗಿ ನೀಡಲು ಉದ್ದೇಶಿಸಿದ್ದು, ಏ.1 ರಿಂದ ಜಾರಿಗೆ ಬರಲಿದೆ ಎಂದರು. ರಾಜ್ಯವು ರಾಷ್ಟ್ರದಲ್ಲಿಯೇ ಪ್ರಪ್ರಥಮವಾಗಿ ರಾಷ್ಟ್ರೀಯ ಶಿಕ್ಷಣ ನೀತಿ–2020 (ಎನ್‌ಇಪಿ) ಜಾರಿಗೊಳಿಸಿದೆ. ಎನ್‌ಇಪಿ ಅಡಿಯಲ್ಲಿ ಶೈಕ್ಷಣಿಕ ಮತ್ತು ಆಡಳಿತ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜು ನಿರ್ವಹಣಾ ವ್ಯವಸ್ಥೆ ತಂತ್ರಾಂಶ ಅಭಿವೃದ್ಧಿಪಡಿಸಲಾಗಿದೆ ಎಂದರು.

## 402 ಲೆಕ್ಕ ಪರಿಶೋಧಕರ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಕೆ : ಸಚಿವ ಎಸ್.ಟಿ. ಸೋಮಶೇಖರ್




**ಬೆಂಗಳೂರು :** ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯಲ್ಲಿ ಖಾಲಿ ಇರುವ 402 ಲೆಕ್ಕ ಪರಿಶೋಧಕರ ಹುದ್ದೆಗಳ ನೇಮಕಾತಿಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೋವಿಡ್‌ನಿಂದಾಗಿ ಕಳೆದ ಎರಡು ವರ್ಷದಿಂದ ಹುದ್ದೆಗಳ ನೇಮಕಾತಿಗೆ ಅನುಮತಿ ನೀಡಿರಲಿಲ್ಲ ಎಂದು ಸಹಕಾರ ಸಚಿವ ಎಸ್.ಟಿ. ಸೋಮಶೇಖರ್ ಹೇಳಿದರು. ಸಹಕಾರಿ ಲೆಕ್ಕಪರಿಶೋಧನಾ ಇಲಾಖೆಯನ್ನು ಬಲಪಡಿಸಲು ಇಲಾಖೆ ಕೈಗೊಂಡಿರುವ ಕ್ರಮಗಳ ಬಗ್ಗೆ ವಿಧಾನ ಪರಿಷತ್ ಸದಸ್ಯರಾದ ಭಾರತಿಶೆಟ್ಟಿ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಲೆಕ್ಕ ಪರಿಶೋಧನೆ ವರದಿ ಆಧಾರದ ಮೇಲೆ ಸಂಘ ಸಂಸ್ಥೆಗಳು ಕಾರ್ಯ ನಿರ್ವಹಿಸುತ್ತವೆ. ಖಾಲಿ ಇರುವ 402 ಲೆಕ್ಕ ಪರಿಶೋಧಕರ ಹುದ್ದೆಗಳ ನೇಮಕ ಪ್ರಕ್ರಿಯೆ ಚಾಲನೆಯಲ್ಲಿದೆ ಎಂದರು.

ಶ್ರೀ ಗುರು ರಾಘವೇಂದ್ರ ಸಹಕಾರ ಬ್ಯಾಂಕ್‌ನಿಂದ ಠೇವಣಿದಾರರಿಗೆ ವಂಚನೆಯಾಗಿರುವ ಬಗ್ಗೆ ಕೈಗೊಂಡಿರುವ ಕ್ರಮಗಳೇನು ಎಂದು ವಿಧಾನಪರಿಷತ್ ಸದಸ್ಯರಾದ ಯು.ಬಿ. ವೆಂಕಟೇಶ್ ಅವರ ಪ್ರಶ್ನೆಗೆ ಉತ್ತರಿಸಿದ ಸಚಿವರು, ಭಾರತೀಯ ರಿಸರ್ವ್ ಬ್ಯಾಂಕ್ ಸಲಹೆ ಮೇರೆಗೆ ಹಾಗೂ ಹೈಕೋರ್ಟ್ ನಿರ್ದೇಶನದ ಪ್ರಕಾರ ಬ್ಯಾಂಕಿನ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಲಾಗಿದೆ.

ರಾಜ್ಯದಲ್ಲಿ ಯಾವುದೇ ಎಪಿಎಂಸಿಗಳು ನಷ್ಟದಲ್ಲಿಲ್ಲ ಹಾಗೂ ಎರಡೆರಡು ಎಪಿಎಂಸಿಗಳನ್ನು ವಿಲೀನಗೊಳಿಸುವ ಪ್ರಸ್ತಾವನೆ ಪ್ರಸ್ತುತ ಸರ್ಕಾರದ ಮುಂದೆ ಇಲ್ಲ ಎಂದು ವಿಧಾನಪರಿಷತ್ ಸದಸ್ಯ ಕೆ.ಹರೀಶ್ ಕುಮಾರ್ ಅವರ ಪ್ರಶ್ನೆಗೆ ಉತ್ತರಿಸಿದರು. 1.50 ರೂ. ಸೆಸ್ ಇದ್ದಾಗ ವರ್ಷಕ್ಕೆ 625 ಕೋಟಿ ರೂ. ಹಣ ಸಂಗ್ರವಾಗುತ್ತಿತ್ತು. ಈಗ 130 ರಿಂದ 170 ಕೋಟಿ ರೂ. ಸಂಗ್ರಹವಾಗುತ್ತಿದೆ. ಸೆಸ್ ಕಡಿಮೆ ಮಾಡಿದ ಕಾರಣಕ್ಕೆ ಎಪಿಎಂಸಿಗಳು ನಷ್ಟದಲ್ಲಿ ಇಲ್ಲ ಎಂದರು.

## ಶ್ರೇಷ್ಠ ಸಹಕಾರಿ, "ಸಹಕಾರಿ ರತ್ನ" ಪುರಸ್ಕೃತ, ಮಾಜಿ ಶಾಸಕ ಹೆಚ್.ಡಿ. ಚೌಡಯ್ಯ ವಿಧಿವಶ - ಸಹಕಾರ ಕ್ಷೇತ್ರಕ್ಕಾದ ನಷ್ಟ



ಮಂಡ್ಯ ಜಿಲ್ಲೆಯ ರೈತ ಮುಖಂಡರು, ಶ್ರೇಷ್ಠ ಸಹಕಾರಿಗಳು, ಸಹಕಾರ ರತ್ನ ಪುರಸ್ಕೃತರು, ಮಾಜಿ ಶಾಸಕರೂ ಆದ ಹೆಚ್.ಡಿ. ಚೌಡಯ್ಯನವರು ಇತ್ತೀಚೆಗೆ ವಿಧಿವಶರಾದರು. ರೈತ ಬಂಧುವಾಗಿ, ಸಹಕಾರಿ ಮುಖಂಡರಾಗಿ, ನಾಡಿನ ನೆಲ, ಜಲ ಹೋರಾಟದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಾಡಿನ ಜನತೆಯ ಪ್ರೀತಿ ಗೌರವಗಳಿಗೆ ಪಾತ್ರರಾಗಿದ್ದರು.

ಮಂಡ್ಯ ಜಿಲ್ಲೆಯಲ್ಲಿ ಸಹಕಾರಿ ಚಳವಳಿ ಉತ್ತುಂಗದೆತ್ತರಕ್ಕೆ ಬೆಳೆಯಲು ಕಾರಣಕರ್ತರಾಗಿದ್ದ ಚೌಡಯ್ಯನವರು ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್, ತಾಲ್ಲೂಕು ಕೃಷಿ ಉತ್ಪನ್ನ ಮಾರಾಟ ಸಹಕಾರ ಸಂಘಗಳ ಬೆಳವಣಿಗೆಗೆ ಅಪಾರ ಕೊಡುಗೆ ನೀಡಿದ್ದರು.

ದಿ. ಕೆ.ವಿ. ಶಂಕರಗೌಡರು ಸ್ಥಾಪಿಸಿದ ಖ್ಯಾತ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾಗಿ ಚೌಡಯ್ಯನವರು ಮಾರ್ಗದರ್ಶನ ಮಾಡಿದರು. ನಾಲ್ಕು ಬಾರಿ ಶಾಸಕರಾಗಿ, ಸದನದಲ್ಲಿ ರೈತರ ಧ್ವನಿಯಾಗಿದ್ದವರು. ಹೆಚ್.ಡಿ. ಚೌಡಯ್ಯನವರ ನಿಧನ ಸಹಕಾರ ಕ್ಷೇತ್ರಕ್ಕಾದ ನಷ್ಟ ಎಂದು ಭಾವಿಸಿ ಅವರ ಆತ್ಮಕ್ಕೆ ಚಿರಶಾಂತಿ ನೀಡಲೆಂದು, ಅವರ ಕುಟುಂಬ ವರ್ಗಕ್ಕೆ ನಿಧನದ ದುಃಖವನ್ನು ಭರಿಸುವ ಶಕ್ತಿ ನೀಡಲೆಂದು ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಲಲಿತ ಜಿ.ಟಿ. ದೇವೇಗೌಡ, ಆಡಳಿತ ಮಂಡಳಿ ನಿರ್ದೇಶಕರುಗಳು ಪ್ರಾರ್ಥಿಸಿದ್ದಾರೆ.

## ಕವಿ ಸಾಮ್ರಾಟರೆನಿಸಿದ್ದ ಚನ್ನವೀರಕಣವಿ ಕಣ್ಮರೆ ಬಡವಾಯಿತು ಕನ್ನಡ ಸಾಹಿತ್ಯ - ಚಿರವಾಗಿರಲಿ ನೆನಪು



ಕನ್ನಡ ಸಾಹಿತ್ಯದ ಸಾಮ್ರಾಟರೆಂದೇ ಖ್ಯಾತರಾಗಿದ್ದ ಶ್ರೇಷ್ಠ ಕವಿ, ವಿದ್ವಾಂಸ, ಹೊಸಗನ್ನಡ ಕಾವ್ಯದ ಪ್ರವರ್ತಕ ಚನ್ನವೀರಕಣವಿ ಅವರ ನಿಧನ ಕನ್ನಡ ಸಾಹಿತ್ಯಕ್ಕಾದ ಅಪಾರ ನಷ್ಟ ಎನಿಸಿದೆ.

ಕನ್ನಡ ಸಾಹಿತ್ಯಕ್ಕೆ ಶ್ರೇಷ್ಠತೆಯನ್ನು, ಮೌಲ್ಯವನ್ನು ತಂದುಕೊಟ್ಟಿದ್ದ ಚನ್ನವೀರ ಕಣವಿ ಅವರು ಕವಿತೆಯನ್ನು ಜನತೆಗೆ ತಲುಪಿಸುವ ಕೆಲಸವಾಗಬೇಕೆಂದು ಪ್ರತಿಪಾದಿಸುತ್ತಿದ್ದರು.

"ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ" ಎಂಬುದು ಕಣವಿ ಅವರ ಹಾರೈಕೆಯಾಗಿತ್ತು. ಕಣವಿ ಅವರಿಗೆ ಅವರ ಸಾಹಿತ್ಯ ಶ್ರೀಮಂತಿಕೆಗೆ ರಾಷ್ಟ್ರಪ್ರಶಸ್ತಿಗಳು ದೊರಕಬೇಕಾಗಿದ್ದಿತು. ಹಾಗೆ ದೊರಕದೇ ಇದ್ದರೂ ಕಣವಿ ಅವರಿಗೆ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಪಂಪ ಪ್ರಶಸ್ತಿ, ನಾಡೋಜ ಪ್ರಶಸ್ತಿ ಮುಂತಾದ ಹಲವಾರು ಪ್ರಶಸ್ತಿಗಳು ಲಭ್ಯವಾದವು. ಚನ್ನವೀರಕಣವಿ ಅವರ ಆತ್ಮಕ್ಕೆ ಚಿರಶಾಂತಿ ನೀಡಿ, ಅವರ ನಿಧನದ ದುಃಖವನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬಕ್ಕೆ, ಸಮಸ್ತ ಕನ್ನಡಿಗರಿಗೆ ನೀಡಲೆಂದು ಪತ್ತಿನ ಸಹಕಾರ ಮಹಾಮಂಡಳದ ಅಧ್ಯಕ್ಷರೂ ಆದ ಲಲಿತ ಜಿ.ಟಿ. ದೇವೇಗೌಡ, ಆಡಳಿತ ಮಂಡಳಿ ನಿರ್ದೇಶಕರುಗಳು ಪ್ರಾರ್ಥಿಸಿದ್ದಾರೆ.

## ರೂ. 7 ಕೋಟಿಗಿಂತ ಹೆಚ್ಚು ಸಂಪತ್ತು ಇರುವವರ ಪ್ರಮಾಣ ಶೇಕಡ 11 ರಷ್ಟು ಏರಿಕೆ

**ಮುಂಬೈ :** ವೈಯಕ್ತಿಕವಾಗಿ ರೂ.7 ಕೋಟಿಗಿಂತ ಹೆಚ್ಚಿನ ಸಂಪತ್ತು ಹೊಂದಿರುವವರ ಪ್ರಮಾಣವು ದೇಶದಲ್ಲಿ 2021ರಲ್ಲಿ ಶೇಕಡ 11ರಷ್ಟು ಹೆಚ್ಚಳ ಆಗಿದೆ ಎಂದು ಹುರೂನ್ ವರದಿ ಹೇಳಿದೆ. 2021ರ ಅಂತ್ಯದ ವೇಳೆಗೆ ದೇಶದಲ್ಲಿ ರೂ.7 ಕೋಟಿಗಿಂತ ಹೆಚ್ಚಿನ ಸಂಪತ್ತು ಹೊಂದಿರುವ ಕುಟುಂಬಗಳ ಸಂಖ್ಯೆಯು 4.58 ಲಕ್ಷಕ್ಕೆ ತಲುಪಿದೆ. ಆದರೆ, ಇಷ್ಟು ಸಂಪತ್ತು ಹೊಂದಿರುವವರ ಪೈಕಿ, 'ವೃತ್ತಿ ಬದುಕಿನಲ್ಲಿ ಹಾಗೂ ವೈಯಕ್ತಿಕ ಬದುಕಿನಲ್ಲಿ ಸಂತಸವಾಗಿದ್ದೇವೆ' ಎಂದು ಹೇಳಿಕೊಳ್ಳುವವರ ಪ್ರಮಾಣವು ಶೇಕಡ 66ಕ್ಕೆ ಇಳಿಕೆಯಾಗಿದೆ. ಈ ಪ್ರಮಾಣವು 2020ರಲ್ಲಿ ಶೇ.72ರಷ್ಟು ಇತ್ತು. ದೇಶದಲ್ಲಿ ಅಸಮಾನತೆ ಹೆಚ್ಚಾಗುತ್ತಿದೆ ಎಂಬ ಕಳವಳ ಜಾಸ್ತಿ ಆಗುತ್ತಿರುವ ಸಂದರ್ಭದಲ್ಲಿಯೇ ಈ ವರದಿಯು ಪ್ರಕಟವಾಗಿದೆ. 2026ರ ಸುಮಾರಿಗೆ ಇಷ್ಟು ಸಂಪತ್ತು ಹೊಂದಿರುವವರ ಪ್ರಮಾಣವು ಶೇ 30ರಷ್ಟು ಜಾಸ್ತಿ ಆಗಲಿದೆ ಎಂದು ವರದಿಯು ಅಂದಾಜು ಮಾಡಿದೆ.

ಮುಂಬೈನ ಒಟ್ಟು 20,300 ಕುಟುಂಬಗಳು ರೂ. 7 ಕೋಟಿಗಿಂತ ಹೆಚ್ಚಿನ ಸಂಪತ್ತು ಹೊಂದಿವೆ. ಹುರೂನ್ ಸಮೀಕ್ಷೆಯಲ್ಲಿ ಪಾಲ್ಗೊಂಡಿದ್ದ ಕೋಟ್ಯಧೀಶರ ಪೈಕಿ ಶೇಕಡ 19ರಷ್ಟು ಮಂದಿ ಮಾತ್ರ, ತಾವು ಗಳಿಸಿದ್ದನ್ನು ಸಮಾಜಕ್ಕೆ ದಾನವಾಗಿ ನೀಡುವ ವಿಚಾರದಲ್ಲಿ ನಂಬಿಕೆ ಹೊಂದಿರುವುದಾಗಿ ಹೇಳಿದ್ದಾರೆ.

# ಮೈಸೂರಿನಲ್ಲಿ ಸಹಕಾರ ಸಂಸ್ಥೆಗಳಿಗೆ ಸಹಕಾರ ಸಮ್ಮಾನ್ ಪ್ರಶಸ್ತಿ ಪ್ರದಾನ

# ಗ್ರಾಮಪಂಚಾಯ್ತಿಗೊಂದು ಸಹಕಾರ ಸಂಘ : ಸಚಿವ ಎಸ್.ಟಿ. ಸೋಮಶೇಖರ್



**ಮೈಸೂರು:** ಒಂದು ಹಳ್ಳಿಯಲ್ಲಿ ಎರಡು, ಮೂರು ಸಹಕಾರ ಸಂಘಗಳಿದ್ದರೆ ಅವುಗಳ ಪ್ರಗತಿ ಕುಂಠಿತವಾಗುವ ಸಾಧ್ಯತೆ ಹೆಚ್ಚಾಗಿರುವುದರಿಂದ ಒಂದು ಗ್ರಾಮ ಪಂಚಾಯತ್‌ಗೆ ಒಂದು ಸಂಘ ತೆರೆಯುವುದು ಸೂಕ್ತ ಎಂದು ಸಹಕಾರ ಸಚಿವರು ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವರಾದ ಎಸ್.ಟಿ. ಸೋಮಶೇಖರ್ ಅವರು ಅಭಿಪ್ರಾಯಪಟ್ಟರು.

ಎಂಸಿಡಿಸಿಸಿ ಬ್ಯಾಂಕು, ಮೈಸೂರು ಹಾಲು ಒಕ್ಕೂಟ, ಮೈಸೂರು ಜಿಲ್ಲಾ ಸಹಕಾರ ಯೂನಿಯನ್ ಹಾಗೂ ವಿಜಯ ಕರ್ನಾಟಕ ದಿನಪತ್ರಿಕೆ ಸಂಯುಕ್ತಾಶ್ರಯದಲ್ಲಿ ಇತ್ತೀಚೆಗೆ ಏರ್ಪಡಿಸಿದ್ದ "ಸಹಕಾರ ಸಮ್ಮಾನ್" ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಸಚಿವರು, ಕೃಷಿ ಪತ್ತಿನ ಸಹಕಾರ ಸಂಘಗಳನ್ನು ಸಾಲ ವಿತರಣೆಗೆ, ರೈತರ ಅನುಕೂಲಕ್ಕಾಗಿ ಆರಂಭಿಸಲಾಗಿದೆ. ರಾಜ್ಯದಲ್ಲಿ 5400 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ 2400 ಸ್ವಂತ ಕಟ್ಟಡಗಳನ್ನು ಒಳಗೊಂಡಿದ್ದು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದರು.

ಅಪೆಕ್ಸ್ ಬ್ಯಾಂಕ್, ಡಿಸಿಸಿ ಬ್ಯಾಂಕುಗಳು ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು ಒಂದೇ ಸಾಫ್ಟ್‌ವೇರ್ ಅಡಿಯಲ್ಲಿ ಕಾರ್ಯನಿರ್ವಹಿಸುವಂತೆ ಕೇಂದ್ರ ಸರ್ಕಾರ ಘೋಷಣೆ ಮಾಡಿದೆ. ಒಂದೇ ಸಾಫ್ಟ್‌ವೇರ್ ಅಡಿ ಕಾರ್ಯನಿರ್ವಹಿಸುವುದರಿಂದ ಪಾರದರ್ಶಕ ಸೇವೆಗಳನ್ನು ನೀಡಬಹುದಾಗಿದೆ ಎಂದರು. ಸಹಕಾರ ಸಂಘಗಳಲ್ಲಿ ಕೆಲವೊಂದು ತಿದ್ದುಪಡಿ ಮಾಡುವ ಬಗ್ಗೆ ಪರಾಮರ್ಶಿಸಲಾಗುತ್ತಿದೆ. ಈಗಾಗಲೇ ಕೆಲವೊಂದು ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು ಅಗತ್ಯವಿದ್ದರೆ ಮತ್ತಷ್ಟು ತಿದ್ದುಪಡಿ ಮಾಡಲಾಗುವುದು. ಸಹಕಾರ ಮಹಾಮಂಡಳ ಸಹಕಾರ ಇಲಾಖೆಗೆ ಮಾತೃ ಸಂಸ್ಥೆ. ಮಾರ್ಗದರ್ಶನ ಮಾಡುವ ಸಂಸ್ಥೆ ಎಂದು ಹೇಳಿದರು.

### ಸಹಕಾರ ಸಂಘಗಳು ರೈತರಿಗೆ ಸಂಜೀವಿನಿ

ರೈತರಿಗೆ ಸಹಕಾರ ಸಂಘಗಳು ಸಂಜೀವಿನಿ ಇದ್ದಂತೆ ಎಂದು ಶಾಸಕರು ಹಾಗೂ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳದ ಅಧ್ಯಕ್ಷರಾದ ಜಿ.ಟಿ. ದೇವೇಗೌಡರು ಹೇಳಿದರು.

"ಸಹಕಾರ ಸಮ್ಮಾನ್" ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಸಹಕಾರ ಸಂಘಗಳು ರೈತರಿಗೆ ನೆರವಾಗುವ ಮೂಲಕ ರೈತರನ್ನು ಉಳಿಸಿ, ಬೆಳೆಸಬೇಕು. ರೈತರನ್ನು ಕಾಪಾಡುತ್ತಿರುವುದು ಸಹಕಾರ ಸಂಘಗಳು. ರೈತರಿಗೆ ಸಾಲ ಕೊಡುವುದರ ಜೊತೆಗೆ ಕೃಷಿ ಕುರಿತು ಮಾಹಿತಿ ನೀಡಬೇಕು ಎಂದು ಸಲಹೆ ನೀಡಿದರು.

ಮೈಸೂರು–ಚಾಮರಾಜನಗರ ಡಿಸಿಸಿ ಬ್ಯಾಂಕ್ ಅಧ್ಯಕ್ಷರಾದ ಜಿ.ಡಿ.ಹರೀಶ್ ಗೌಡ ಅವರು ಮಾತನಾಡಿ, ಡಿಸಿಸಿ ಬ್ಯಾಂಕಿನಲ್ಲಿ ಈ ಬಾರಿ 1,250 ಕೋಟಿ ಸಾಲವನ್ನು ನೀಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಡಿಸೆಂಬರ್ ಅಂತ್ಯಕ್ಕೆ ಈ ಸಾಲವನ್ನು ವಿತರಣೆ ಮಾಡಿದ್ದೇವೆ. ಕಳೆದ 3 ವರ್ಷ ಅವಧಿಯಲ್ಲಿ 660 ಕೋಟಿ ಸಾಲವನ್ನು ಕೊಟ್ಟಿದ್ದೇವೆ. ಕಳೆದ ಎರಡುವರೆ ವರ್ಷಗಳಲ್ಲಿ 1,250 ಕೋಟಿ ಸಾಲವನ್ನು ರೈತರಿಗೆ ಕೊಟ್ಟಿದ್ದೇವೆ. 45 ಸಾವಿರ ರೈತ ಕುಟುಂಬಗಳಿಗೆ 660 ಕೋಟಿ ಸಾಲವನ್ನು, 91 ಸಾವಿರ ರೈತ ಕುಟುಂಬಗಳಿಗೆ 1,250 ಕೋಟಿ ಸಾಲವನ್ನು ಕೊಟ್ಟಿದ್ದೇವೆ ಎಂದು ಮಾಹಿತಿ ನೀಡಿದರು.

ಸರ್ಕಾರ ಸಾಲ ಮನ್ನಾ ಬಾಕಿ ಹಣವನ್ನು ಹಂತ ಹಂತವಾಗಿ ಬಿಡುಗಡೆ ಮಾಡುತ್ತಿದೆ ಎಂದರು. ಎಂಸಿಡಿಸಿಸಿ ಬ್ಯಾಂಕಿಗೆ ಲೆಕ್ಕಪರಿಶೋಧನೆಯಲ್ಲಿ "ಎ" ಗ್ರೇಡ್ ದೊರೆತಿದ್ದು, ಡಿಸಿಸಿ ಬ್ಯಾಂಕ್ ಕಳೆದ ಎರಡು ವರ್ಷಗಳಲ್ಲಿ 750 ಕೋಟಿ ಠೇವಣಿ ಸಂಗ್ರಹ ಮಾಡಿದ್ದೇವೆ. 660 ಕೋಟಿ ಇದ್ದ ಸಾಲವನ್ನು 1250 ಕೋಟಿ ಸಾಲ ನೀಡಿಕೆ ಏರಿಸಿದ್ದೇವೆ. 27 ಲಕ್ಷ ಲಾಭ ಇತ್ತು. ಈಗ 4 ಕೋಟಿ ಲಾಭವನ್ನು ಮಾಡಿದ್ದೇವೆ. ಈ ಬಾರಿ 10 ಕೋಟಿ ಲಾಭವನ್ನು ಮಾಡುತ್ತೇವೆ ಎಂಬ ಭರವಸೆ ಇದೆ ಎಂದರು.

# ಸಹಕಾರ ಚುನಾವಣಾ ಪ್ರಾಧಿಕಾರ

**ಟಿ.ಟಿ.ಎಂ.ಸಿ ಕಟ್ಟಡ, 3ನೇ ಮಹಡಿ, ಎ–ಬ್ಲಾಕ್, ಶ್ರೀ ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಬೆಂಗಳೂರು–560027**

**ಸಂಖ್ಯೆ:ಸಚುಪ್ರಾ/ಆಡಳಿತ/ಕೋವಿಡ್–19/6(6)/ಸುತ್ತೋಲೆ/2022** **ದಿನಾಂಕ : 11.02.2022**

## ಚುನಾವಣಾ ತುರ್ತು

## ಸುತ್ತೋಲೆ

**ವಿಷಯ : ಸಹಕಾರ ಸಂಘಗಳ /ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಚುನಾವಣೆಗಳನ್ನು ನಡೆಸುವ ಬಗ್ಗೆ.**

**ಉಲ್ಲೇಖ : 1)ಸರ್ಕಾರದ ಪತ್ರ ಸಂಖ್ಯೆ:ಸಿಒ.03.ಸಿ.ಎಲ್.ಎಮ್.2022(ಇ) ದಿನಾಂಕ:19.01.2022**

**2) ಈ ಕಛೇರಿ ಸುತ್ತೋಲೆ ಸಂಖ್ಯೆ :ಸಚುಪ್ರಾ/ಆಡಳಿತ/ಕೋವಿಡ್–19/6(5) ಸುತ್ತೋಲೆ/2022 ದಿನಾಂಕ : 20.01.2022**

**3) ಸರ್ಕಾರದ ಪತ್ರ ಸಂಖ್ಯೆ:ಸಿಒ.03.ಸಿಎಲ್ಎಮ್.2022(ಇ) ದಿನಾಂಕ : 11.02.2022**

*****

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರಗಳ ಕಡೆ ಗಮನವನ್ನು ಸೆಳೆಯಲಾಗಿದೆ. ಉಲ್ಲೇಖ(1)ರ ಸರ್ಕಾರದ ಪತ್ರದಲ್ಲಿ ಕೋವಿಡ್–19ರ 3ನೇ ಅಲೆಯ ಓಮಿಕ್ರಾನ್ ತಳಿಯು ಸಾಂಕ್ರಾಮಿಕವಾಗಿ ಹರಡುತ್ತಿರುವ ಕಾರಣ ಸಹಕಾರ ಸಂಘಗಳ /ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಸಾಮಾನ್ಯ ಚುನಾವಣೆಗಳನ್ನು ಮಾರ್ಚ್–2022 ಅಂತ್ಯದವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಲು ಕ್ರಮವಿಡುವಂತೆ ತಿಳಿಸಿದ ಹಿನ್ನೆಲೆಯಲ್ಲಿ ಉಲ್ಲೇಖ(2)ರ ಈ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ಧ ಸಹಕಾರಿಗಳ ಆಡಳಿತಮಂಡಳಿ ಸಾಮಾನ್ಯ ಚುನಾವಣೆಗಳನ್ನು ಮತ್ತು ಆಡಳಿತಮಂಡಲಿಯಲ್ಲಿ ಖಾಲಿಬಿದ್ದ ನಿರ್ದೇಶಕರ ಸ್ಥಾನದ ಚುನಾವಣೆಗಳನ್ನು ಮಾರ್ಚ್–2022ರವರೆಗೆ ಅಥವಾ ಮುಂದಿನ ಆದೇಶದವರೆಗೆ ಮುಂದೂಡಿ ಸುತ್ತೋಲೆಯನ್ನು ಹೊರಡಿಸಲಾಗಿತ್ತು.

ಉಲ್ಲೇಖ(3)ರ ಸರ್ಕಾರದ ಪತ್ರದಲ್ಲಿ ಅನೇಕ ಸಹಕಾರಿಗಳು, ಜನಪ್ರತಿನಿಧಿಗಳು ಸಹಕಾರ ಸಂಘಗಳ ಚುನಾವಣೆಗಳನ್ನು ನಡೆಸಲು ಅನುಮತಿ ಕೋರಿ ಸರ್ಕಾರಕ್ಕೆ ಮನವಿಗಳನ್ನು ಸಲ್ಲಿಸಿರುತ್ತಾರೆ. ಪ್ರಸ್ತುತ ಕೋವಿಡ್–19 ಸಾಂಕ್ರಾಮಿಕ ರೋಗ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವುದರಿಂದ ರಾಜ್ಯದಲ್ಲಿನ ಹಲವಾರು ವಲಯಗಳಿಗೆ ಕೋವಿಡ್ ನಿರ್ಬಂಧಗಳಿಗೆ ರಾಜ್ಯ ಸರ್ಕಾರವು ವಿನಾಯಿತಿ ನೀಡಿರುವುದರಿಂದ ಸಹಕಾರ ಸಂಘ ಮತ್ತು ಬ್ಯಾಂಕುಗಳ ಹಿತದೃಷ್ಟಿಯಿಂದ ಚುನಾವಣೆಗಳನ್ನು ನಡೆಸಲು ಅನುಮತಿ ನೀಡುವುದು ಸೂಕ್ತವಾದುದರಿಂದ ಸಹಕಾರ ಸಂಘಗಳ/ ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಆಡಳಿತಮಂಡಲಿ ಚುನಾವಣೆಗಳನ್ನು ಸೇರಿದಂತೆ ಎಲ್ಲಾ ಚುನಾವಣೆಗಳನ್ನು ನಡೆಸಲು ಸೂಕ್ತ ಸುತ್ತೋಲೆ ಹೊರಡಿಸುವಂತೆ ನಿರ್ದೇಶಿಸಲಾಗಿರುತ್ತದೆ.

ಅದರಂತೆ, ಉಲ್ಲೇಖ(2)ರ ಕಛೇರಿಯ ಸುತ್ತೋಲೆಯಲ್ಲಿ ರಾಜ್ಯದ ಎಲ್ಲಾ ಸಹಕಾರ ಸಂಘಗಳು / ಬ್ಯಾಂಕುಗಳು ಮತ್ತು ಸೌಹಾರ್ಧ ಸಹಕಾರಿಗಳ ಸಾಮಾನ್ಯ ಚುನಾವಣೆ ಮತ್ತು ಆಡಳಿತಮಂಡಲಿಯಲ್ಲಿ ಖಾಲಿ ಬಿದ್ದ ನಿರ್ದೇಶಕರ ಸ್ಥಾನಗಳ ಚುನಾವಣೆಯನ್ನು ನಡೆಸಲು ವಿಧಿಸಿದ್ದ ನಿರ್ಬಂಧವನ್ನು ತೆರವುಗೊಳಿಸಿ, ಚುನಾವಣೆಗೆ ಬಾಕಿ ಇರುವ ರಾಜ್ಯದ ಎಲ್ಲಾ ಸಹಕಾರ ಸಂಘಗಳ / ಬ್ಯಾಂಕುಗಳ ಮತ್ತು ಸೌಹಾರ್ಧ ಸಹಕಾರಿಗಳ ಚುನಾವಣೆಗಳನ್ನು ಮುಂದೂಡುವ ಪೂರ್ವದಲ್ಲಿ ಯಾವ ಹಂತದಲ್ಲಿ ನಿಲ್ಲಿಸಲಾಗಿತ್ತೋ ಆ ಹಂತದಿಂದ ಪ್ರಾರಂಭಿಸಿ, ಕೋವಿಡ್–19ರ ಮಾರ್ಗಸೂಚಿಗಳನ್ನು ಅನುಸರಿಸಿ ಚುನಾವಣಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ತಿಳಿಸಿದೆ.

**(ಡಾ: ಎನ್.ಎಸ್.ಚನ್ನಪ್ಪಗೌಡ)**
ಆಯುಕ್ತರು
ಸಹಕಾರ ಚುನಾವಣಾ ಪ್ರಾಧಿಕಾರ,
ಬೆಂಗಳೂರು.

# ಶಿವ ಶಿವ ಎಂದರೆ ಭಯವಿಲ್ಲ : ಮಹಾ ಶಿವರಾತ್ರಿ ಆಚರಿಸಿ ಶಿವನ ಕೃಪೆಗೆ ಪಾತ್ರರಾಗೋಣ

ಭಕ್ತರ ಇಷ್ಟಾರ್ಥಗಳನ್ನು ಈಡೇರಿಸುವ ದೇವರೆಂದೆ ಖ್ಯಾತಿ ಶಿವ ಪರಮಾತ್ಮನಿಗಿದೆ. ಜಗತ್ತಿನಾದ್ಯಂತ ಕೋಟ್ಯಾಂತರ ತಮ್ಮ ಕಷ್ಟಕಾರ್ಪಣ್ಯಗಳ ನಿವಾರಣೆಗಾಗಿ ಪ್ರತಿದಿನ ಪ್ರಾರ್ಥಿಸುತ್ತಾರೆ. ಮಹಾಶಿವರಾತ್ರಿ ಆಚರಣೆ ಸಮಯದಲ್ಲಿ ಶಿವನ ದೇವಸ್ಥಾನಕ್ಕೆ ತೆರಳಿ ತಮ್ಮ ನೆಚ್ಚಿನ ದೇವರಿಗೆ ಭಕ್ತರು ಅಹೋರಾತ್ರಿ ಜಾಗರಣೆ ಮಾಡುವ ವಿಶೇಷ ಪೂಜೆ ಸಲ್ಲಿಸುತ್ತಾರೆ.

ಮಹಾಶಿವರಾತ್ರಿ ಹಿಂದೂಗಳ ಪ್ರಮುಖ ಹಬ್ಬಗಳಲ್ಲೊಂದು. ಈ ಹಬ್ಬವನ್ನು ಮಾಘ ಮಾಸದ ಬಹುಳ ಚತುರ್ದಶಿಯಂದು ಆಚರಿಸಲಾಗುತ್ತದೆ. ಸಾಮಾನ್ಯವಾಗಿ ಫೆಬ್ರವರಿ ಅಥವಾ ಮಾರ್ಚ್ ತಿಂಗಳಿನಲ್ಲಿ ಶಿವರಾತ್ರಿ ಹಬ್ಬ ಬರುತ್ತದೆ. ಇಡೀ ದಿನ ಉಪವಾಸ, ಜಾಗರಣೆಗಳನ್ನು ಮಾಡಿ, ಶಿವ ಪೂಜೆ ಮಾಡುವ ಮೂಲಕ ಆಚರಿಸಲಾಗುತ್ತದೆ. ಮರುದಿನ ವಿವಿಧ ರೀತಿಯ ಸಿಹಿ ತಿನಿಸುಗಳನ್ನು ತಯಾರಿಸುವರು. ತಂಬಿಟ್ಟು ಈ ಹಬ್ಬದ ಪ್ರಮುಖ ತಿನಿಸು.

### ಶಿವರಾತ್ರಿಯ ದಿನ ರಾತ್ರಿ ಪೂಜೆಯೇ ವಿಶೇಷ

ಸಾಮಾನ್ಯವಾಗಿ ಎಲ್ಲ ಹಬ್ಬಗಳಲ್ಲಿಯೂ ದೇವರಿಗೆ ಹಗಲು ಪೂಜೆ ನಡೆಯುತ್ತದೆ. ಆದರೆ ಶಿವರಾತ್ರಿ ಮಾತ್ರ ರಾತ್ರಿಯ ಹೊತ್ತು ಪೂಜೆ, ಭಜನೆ ನಡೆಸುವ ವಿಶೇಷ ಆಚರಣೆ. ರಾತ್ರಿ ಎಂದರೆ ಕತ್ತಲು, ಕತ್ತಲು ಎಂದರೆ ಅಜ್ಞಾನ. ಅಜ್ಞಾನವನ್ನು ಕಳೆದು ಸುಜ್ಞಾನ ಬೆಳಗಿಸು ಎಂದು ಆ ಶಿವನನ್ನು ಬೇಡುವ ಶುಭ ದಿನವೇ ಶಿವರಾತ್ರಿ. ಅಜ್ಞಾನ ತುಂಬಿರುವಲ್ಲಿ ಶಿವ ಸಂಚರಿಸಿ ಜ್ಞಾನ ದೀವಿಗೆಯನ್ನು ಬೆಳಗುತ್ತಾನೆ ಎಂಬ ನಂಬಿಕೆ ಇದೆ.

ಶಿವನಿಗೆ ಅತೀ ಶ್ರೇಷ್ಠವಾಗಿರುವ ಬಿಲ್ವ ಪತ್ರೆಯನ್ನು ಅರ್ಪಿಸಿ, ಪುಷ್ಪ, ತುಳಸಿಯಿಂದ ಶಿವಲಿಂಗವನ್ನು ಅಲಂಕಾರ ಮಾಡಿ ಶಿವನ್ನು ಭಜಿಸಿದರೆ, ಪಾಪಗಳು ಪರಿಹಾರವಾಗುತ್ತವೆ, ಮೋಡಗಳೇ ಇಲ್ಲದ ಶುಭ್ರ ಆಕಾಶದಲ್ಲಿ ಬಂದಿರುವ ಚಂದ್ರನ ಬೆಳಕಿನಲ್ಲಿ ಶಿವನಿಗೆ ಅಭಿಷೇಕ ಮಾಡಿ ಆರಾಧಿಸಿದರೆ ಅತ್ಯಂತ್ರ ಶ್ರೇಷ್ಠ ಎಂಬ ನಂಬಿಕೆಗಳಿವೆ. ಶಿವರಾತ್ರಿಯ ದಿನವಿಡೀ ಉಪವಾಸ ಮಾಡಿ, ಜಾಗರಣೆ ಮಾಡಿ ಶಿವನನ್ನು ಆರಾಧಿಸಿದರೆ ಸಕಲ ಪಾಪಗಳೂ ಕಳೆಯುತ್ತವೆ ಎಂದು ನಂಬಲಾಗಿದೆ.

ಎಲ್ಲಾ ಜೀವರಾಶಿಗಳನ್ನು ಪೊರೆಯುವ ಶಿವ ಎಲ್ಲಾ ಆಡಂಬರಗಳಿಂದ ಮುಕ್ತ. ಆತ ಆಭರಣಪ್ರಿಯನಲ್ಲ, ಅಲಂಕಾರ ಪ್ರಿಯನೂ ಅಲ್ಲ. ಭಸ್ಮವನ್ನು ಬಳಿದುಕೊಂಡು, ಹುಲಿಯ ಚರ್ಮವನ್ನು ಉಟ್ಟು, ಸ್ಮಶಾನದಲ್ಲಿರುವ ಸರಳ ಮತ್ತು ಅಮೋಘ ಶಕ್ತಿ.

ಶಿವನು ಸರಳತೆ, ಪ್ರಾಮಾಣಿಕತೆ ಮತ್ತು ನಿಷ್ಕಲ್ಮಶ ಮನಸ್ಸುಗಳ ಪ್ರತೀಕ. ಛಲಬಿಡದ ಸಾಧನೆಯ ದ್ಯೋತಕ. ಧ್ಯಾನಪ್ರಿಯ ಶಿವ ಭಕ್ತರಿಂದ ಬಯಸುವುದು ನಿಶ್ಕಲ್ಮಶ ಮತ್ತು ಪ್ರಾಮಾಣಿಕ ಭಕ್ತಿ ಮಾತ್ರ. ತೋರಿಕೆಯ ಮತ್ತು ಆಡಂಬರದ ಪೂಜೆಯನ್ನು ಬಯಸದ ಮಹಾದೇವನನ್ನು ಇಂದ್ರಿಯ ನಿಗ್ರಹ, ಧ್ಯಾನ, ಸಂಯಮ ಮತ್ತು ವಿಶ್ವಾಸ ಭರಿತರಾಗಿ ಶಿವರಾತ್ರಿ ಯಂದು ಧ್ಯಾನಿಸಿದರೆ ಆತ ಪ್ರಸನ್ನಗೊಳ್ಳುತ್ತಾನೆ.

ತನ್ನ ನಂಬಿ ಬಂದ ಭಕ್ತರ ಇಷ್ಟಾರ್ಥಗಳಿಗೆ ಎಂದಿಗೂ ನಿರಾಸೆ



ಮಾಡದ ದಯಾಮಯಿ ಶಿವನಿಗೆ ಶಿವರಾತ್ರಿಯಂದು ಜಗತ್ತಿನಾದ್ಯಂತ ವಿಶೇಷ ಪೂಜೆ ಸಲ್ಲಿಸಲಾಗುತ್ತದೆ. ಭಾರತದಾದ್ಯಂತ ಬಹುತೇಕ ಎಲ್ಲಾ ಭಾಗಗಳಲ್ಲೂ ಆಚರಿಸುವ ಹಬ್ಬ ಇದು. ಈ ಹಬ್ಬದಂದು ದಿನವಿಡೀ ಪೂಜೆ, ಉಪವಾಸ ಮಾಡಿ, ರಾತ್ರಿಯಿಡೀ ಜಾಗರಣೆ ಮಾಡಿ ಶಿವನನ್ನು ಆರಾಧಿಸುವ ಸಂಪ್ರದಾಯವಿದೆ.

### ಶಿವರಾತ್ರಿ ಆಚರಣೆ ಕುರಿತು ಶಿವಪುರಾಣದ ಕಥೆ

ಶಿವಪುರಾಣದಲ್ಲಿ ಶಿವರಾತ್ರಿಯ ಆಚರಣೆ ಬಂದಿರುವ ಬಗ್ಗೆ ಒಂದು ಸಣ್ಣ ಕಥೆ ಇದೆ.... ದೇವಲೋಕದಲ್ಲಿ ಒಮ್ಮೆ ಬ್ರಹ್ಮ ಹಾಗೂ ವಿಷ್ಣುವಿನ ನಡುವೆ ಯಾರು ಶ್ರೇಷ್ಠರು ಎಂಬ ವಿಷಯಕ್ಕೆ ವಾಗ್ವಾದಗಳು ನಡೆಯುತ್ತಿದ್ದವು. ಮಹಾ ದೇವತೆಗಳಿಬ್ಬರನ್ನೂ ಸಮಾಧಾನ ಮಾಡುವುದು ದುರ್ಲಭ ಎನಿಸಿದಾಗ, ದೇವತೆಗಳೆಲ್ಲ ಹೋಗಿ ಪರಶಿವನನ್ನು ಬೇಡಿಕೊಳ್ಳುತ್ತಾರೆ. ವಿಷ್ಣು ಹಾಗೂ ಬ್ರಹ್ಮರ ಜಗಳವನ್ನು ಶಮನ ಮಾಡುವಂತೆ ಕೋರಿಕೊಳ್ಳುತ್ತಾರೆ. ಆಗ ವಿಷ್ಣು ಮತ್ತು ಬ್ರಹ್ಮರ ನಡುವೆ ಶಿವ, ಅಗ್ನಿಕಂಭದ ರೂಪದಲ್ಲಿ ಬಂದು ನಿಂತು ತನ್ನ ಮೂಲವನ್ನು ಕಂಡುಹಿಡಿಯಲು ಸೂಚಿಸುತ್ತಾನೆ.

ಆಗ ಹಂಸದ ರೂಪ ತಾಳಿದ ಬ್ರಹ್ಮ ಅಗ್ನಿ ಕಂಭದ ಶಿರವನ್ನು ಹುಡುಕಲು ಮೇಲ್ಮುಖವಾಗಿ ಹೊರಡುತ್ತಾನೆ. ವಿಷ್ಣು ವರಾಹವತಾರ ತಾಳಿ ಕಂಭದ ತಳವನ್ನು ನೋಡುವುದಕ್ಕಾಗಿ ಪಾತಾಳಕ್ಕೆ ಇಳಿಯುತ್ತಾನೆ. ಎಷ್ಟೇ ಮುಂದೆ ಸಾಗಿದರೂ ಬ್ರಹ್ಮ ಹಾಗೂ ವಿಷ್ಣು ಇವರಿಬ್ಬರಿಗೂ ಕಂಭದ ಅಂತ್ಯವೇ ಕಾಣುವುದಿಲ್ಲ. ಅನಂತವಾಗಿರುವ ಶಿವನ ಶಕ್ತಿಯನ್ನು ನೋಡಿದ ವಿಷ್ಣು ಹಾಗೂ ಬ್ರಹ್ಮರಿಗೆ ಸತ್ಯದ ಅರಿವಾಗುತ್ತದೆ. ಆದರೆ ಶಿವನ ಜಡೆಯಿಂದ ಕೆಳಗೆ ಬೀಳುತ್ತಿದ್ದ ಕೇತಕಿ ಪುಷ್ಪದ ಬಳಿ ಬ್ರಹ್ಮನೀನು ಎಲ್ಲಿಂದ ಬೀಳುತ್ತಿದ್ದೀಯ ಎಂದು ಪ್ರಶ್ನಿಸುತ್ತಾನೆ. ಆಗ ಆ ಪುಷ್ಪವು ನಾನು ಅಗ್ನಿ ಕಂಭದ ಶಿರದಿಂದ ಬೀಳುತ್ತಿದ್ದೇನೆ ಎಂಬ ಉತ್ತರ ನೀಡುತ್ತದೆ. ಆಗ ಬ್ರಹ್ಮ ಶಿವನಲ್ಲಿಗೆ ಬಂದು ಕೇತಕಿ ಪುಷ್ಪವನ್ನು ತೋರಿಸಿ, ತಾನು ಅಗ್ನಿ ಕಂಭದ ಶಿರಭಾಗವನ್ನು ನೋಡಿರುವುದಾಗಿಯೂ ಅಲ್ಲಿಂದಲೇ ಕೇತಕಿ ಪುಷ್ಪವನ್ನು ತಂದಿರುವುದಾಗಿಯೂ ಹೇಳುತ್ತಾನೆ. ಇವರಿಬ್ಬರ ಮೋಸವನ್ನು ಅರಿತ ಶಿವ, ಬ್ರಹ್ಮನನ್ನು ಯಾರೂ ಪೂಜಿಸಕೂಡದು

ಎಂದು ಶಾಪ ನೀಡಿ ಲಿಂಗರೂಪ ತಾಳುತ್ತಾನೆ. ಅಂದು ಮಾಘ ಮಾಸದ ಬಹುಳ ಚತುರ್ದಶಿಯಾಗಿರುತ್ತದೆ. ಹೀಗಾಗಿ, ಶಿವ ಲಿಂಗರೂಪ ತಾಳಿದ ಮಾಘ ಮಾಸದ ಬಹುಳ ಚತುರ್ದಶಿಯಂದು ಶಿವರಾತ್ರಿಯನ್ನು ಆಚರಿಸಲಾಗುತ್ತದೆ.

### ಶಿವರಾತ್ರಿಯ ಮಹಿಮೆ

ಕೈಲಾಸವಾಸಿ ಶಿವನಿಗೆ ಶಿವರಾತ್ರಿ ಅತ್ಯಂತ ಪ್ರಿಯವಾದ ದಿನ. ಶಿವರಾತ್ರಿಯಂದು ತನ್ನನ್ನು ಪೂಜಿಸುವ ಭಕ್ತರಿಗೆ ತಾನು ವಿಶೇಷವಾಗಿ ಅನುಗ್ರಹ ನೀಡುವುದಾಗಿ ಸ್ವತ: ಶಿವನೇ ಪಾರ್ವತಿಯಲ್ಲಿ ಅರುಹಿದ್ದಾನೆ ಎನ್ನುತ್ತದೆ ಶಿವಪುರಾಣ. ಶಿವ–ಪಾರ್ವತಿಯರ ವಿವಾಹ ಮಹೋತ್ಸವದ ದಿನವಿದು ಎಂಬುದು ವಿಶೇಷ. ಹಿಮವಂತನ ಮಗಳು ಪಾರ್ವತಿ ಈ ದಿನದಂದು ರಾತ್ರಿಯಿಡಿ ಶಿವನಾಮ ಪಠಿಸುತ್ತಾ, ತಪಸ್ಸು ಮಾಡಿ, ಶಿವನನ್ನು ಮೆಚ್ಚಿಸಿ, ವಿವಾಹವಾದಳೆಂಬುದು ಪ್ರತೀತಿ. ಶಿವ ರುದ್ರತಾಂಡವನಾಡಿದ ರಾತ್ರಿಯೂ ಇಂದೇ ಎನ್ನಲಾಗುತ್ತದೆ. ದೇವತೆಗಳು ಹಾಗೂ ಅಸುರರ ನಡುವೆ ಸಮುದ್ರ ಮಂಥನ ನಡೆದು ವಿಷ ಉದ್ಭವವಾದಾಗ, ಅದನ್ನು ಶಿವ ಕುಡಿದ. ವಿಷ ಗಂಟಲೊಳಗಿಂದ ಇಳಿಯದಂತೆ ಪಾರ್ವತಿ ಇಡೀ ರಾತ್ರಿ ತಡೆದಳು ಎನ್ನುತ್ತದೆ ಶಿವಪುರಾಣದ ಇನ್ನೊಂದು ಮಹಿಮೆ. ಹಾಗಾಗಿ, ಭಕ್ತರು ಇಡೀ ರಾತ್ರಿ ಎಚ್ಚರವಿದ್ದು, ನೀಲಕಂಠನನ್ನು ಸ್ತುತಿಸುತ್ತಾರೆ. ಭಗೀರಥನ ತಪಸ್ಸಿಗೆ ಮೆಚ್ಚಿ ಇಳೆಗೆ ಇಳಿದು ಬಂದ ಗಂಗೆಯನ್ನು ಶಿವ ತನ್ನ ಜಡೆಯಲ್ಲಿ ತುಂಬಿಸಿಕೊಂಡಿದ್ದ. ಇದರಿಂದ ವಿಚಲಿತನಾದ ಭಗೀರಥ ಗಂಗೆಯನ್ನು ಭೂಮಿಗೆ ಹರಿಸುವಂತೆ ಶಿವನನ್ನು ಪ್ರಾರ್ಥಿಸಿದ. ಆತನ ಭಕ್ತಿಗೆ ಮೆಚ್ಚಿ ಶಿವ ಗಂಗೆಯನ್ನು ಹರಿಯಬಿಟ್ಟಿದ್ದು ಇದೇ ದಿನ ಎನ್ನುತ್ತದೆ ಪುರಾಣ. ಲಿಂಗಪುರಾಣದ ಪ್ರಕಾರ, ಲಿಂಗ ರೂಪಿಯಾಗಿ ಭಕ್ತರಿಗೆ ಅನುಗ್ರಹ ನೀಡಿದ ದಿನವಿದು. ಶಿವನ ಆದಿ ಮತ್ತು ಅಂತ್ಯ ಹುಡುಕಲು ಹೊರಟ ವಿಷ್ಣು ಹಾಗೂ ಬ್ರಹ್ಮನಿಗೆ, ಶಿವರಾತ್ರಿಯಂದು ಶಿವ ಲಿಂಗರೂಪಿಯಾಗಿ ದರ್ಶನ ನೀಡಿದ ಎಂಬುದು ಪ್ರತೀತಿ. ಇದು ಸ್ಕಂದ ಪುರಾಣ ಒಂದು ಭಾಗ

### ಮಹಾಶಿವರಾತ್ರಿಯ ಉಪವಾಸ ಮತ್ತು ಜಾಗರಣೆಯ ಮಹತ್ವ

ಪ್ರತಿ ವರ್ಷದ ಶಿವರಾತ್ರಿಯ ಸಮಯದಲ್ಲಿ ಶಿವನು, ಪಾರ್ವತಿಯ ಜೊತೆಯಲ್ಲಿ ಭೂಮಿಗೆ ಆಗಮಿಸುತ್ತಾನೆ.. ಭೂ–ಸಂಚಾರ ಮಾಡುತ್ತಾನೆ.. ಎಲ್ಲ ಸ್ಥಾವರ ಜಂಗಮ ಲಿಂಗಗಳಲ್ಲಿ ಸಂಕ್ರಮಣಗೊಳ್ಳುತ್ತಾನೆ.. ಹೀಗಾಗಿ ಶಿವರಾತ್ರಿಯ ಶಿವನನ್ನು ಯಾರು ಪೂಜಿಸುವರೋ ಅವರ ಪಾಪಗಳು ಪರಿಹಾರವಾಗುತ್ತವೆ ಎಂದು ಸ್ವತಃ ಶಿವನೇ ತಿಳಿಸಿದ್ದಾನೆ ಎಂಬುದರ ಬಗ್ಗೆ ಶಾಸ್ತ್ರೋಕ್ತಿ ಇದೆ. ಕರುಣಾಮಯಿಯಾದ ಶಿವನನ್ನು ಭಕ್ತಿ ಪೂರಕವಾಗಿ ಯಾರೇ ಪೂಜಿಸಿದರೂ ಅವರನ್ನು ಅನುಗ್ರಹಿಸುತ್ತಾನೆ.. ಹಿಂದು



ಮುಂದು ನೋಡದೇ ಅವರಿಗೆ ಬೇಡಿದ ವರಗಳನ್ನು ನೀಡುತ್ತಾನೆ.. ಭಕ್ತಿಗೆ ಮರುಳಾಗುವ ಶಿವನು ಹೀಗೆ ತನ್ನ ಭಕ್ತರಿಗೆ ಬೇಡಿದ ವರವನ್ನು ನೀಡುವುದರ ಮೂಲಕ ಎಷ್ಟೋ ಸಲ ಸಂಕಟಕ್ಕೆ ಸಿಲುಕಿದ್ದೂ ಇದೆ.. ಆದರೆ ಎಂಥದ್ದೇ ಸಂಕಟವಿದ್ದರೂ ಶಿವನು ಭಕ್ತರನ್ನು ಸದಾ ಅನುಗ್ರಹಿಸುತ್ತಲೇ ಇರುತ್ತಾನೆ.. ಅದಕ್ಕೆ ಶಿವ ಶಿವ ಎಂದರೆ ಭಯವಿಲ್ಲ "ಶಿವ ಭಕ್ತನಿಗೆ ನರಕಾ ಇಲ್ಲ" ಅನ್ನೋ ಮಾತಿದೆ.

### ಜಾಗರಣೆ, ಹಬ್ಬದ ಆಚರಣೆ

ಕಾಶಿ ವಿಶ್ವನಾಥ, ಗೋಕರ್ಣದ ಮಹಾಬಲೇಶ್ವರ, ಧರ್ಮಸ್ಥಳದ ಮಂಜುನಾಥೇಶ್ವರ, ರಾಮೇಶ್ವರದ ರಾಮೇಶ್ವರ ಸೇರಿದಂತೆ ರಾಜ್ಯ, ದೇಶ, ವಿದೇಶಗಳ ಶಿವದೇವಾಲಯಗಳಲ್ಲಿ ಅಂದು ವಿಶೇಷ ಪೂಜೆ ನಡೆಯುತ್ತದೆ. ಬಿಲ್ವಾರ್ಚನೆ, ರುದ್ರಾಭಿಷೇಕ, ಶಿವನಾಮ ಧ್ಯಾನಗಳ ಮೂಲಕ ಶಿವನನ್ನು ಆರಾಸಲಾಗುತ್ತದೆ. ಇಡೀ ರಾತ್ರಿ ಶಿವದೇವಾಲಯಗಳಲ್ಲಿ ರುದ್ರಪಠಣದ ಜೊತೆ ಜಾಗರಣೆ ನಡೆಯುತ್ತದೆ. ಶಿವರಾತ್ರಿಯಂದು ಬೆಳಗ್ಗೆ ಬೇಗನೆ ಏಳುವ ಭಕ್ತರು, ಸ್ನಾನ ಮಾಡಿ, ಶುಚಿರ್ಭೂತರಾಗಿ ಶಿವದೇವಾಲಯಕ್ಕೆ ತೆರಳುತ್ತಾರೆ. ಕೆಲವರು ಕೈಲಾಸಯಂತ್ರ ರಚಿಸಿ, ಮನೆಯಲ್ಲಿಯೇ ಶಿವನಿಗೆ ವಿಶೇಷ ಪೂಜೆ ನಡೆಸುತ್ತಾರೆ. ಗಂಗಾ, ಬ್ರಹ್ಮಪುತ್ರ, ಕೃಷ್ಣ, ಕಾವೇರಿ, ತ್ರಿವೇಣಿ ಸಂಗಮ ಸೇರಿದಂತೆ ಪುಣ್ಯನದಿಗಳಲ್ಲಿ ಭಕ್ತರು ಸ್ನಾನ ಮಾಡುತ್ತಾರೆ. ಕೆಲವರು ಹಾಲು, ಹಣ್ಣು ಸೇವಿಸಿ ಲಘು ಉಪಹಾರ ಸೇವಿಸಿದರೆ, ಕೆಲವು ಭಕ್ತರು ದಿನವಿಡಿ ಏನನ್ನೂ ತಿನ್ನದೆ, ನೀರನ್ನೂ ಕುಡಿಯದೆ ಉಪವಾಸ ಇರುತ್ತಾರೆ. ಭಸ್ಮ ಲೇಪಿಸಿಕೊಂಡು, ಬಿಲ್ವಾರ್ಚನೆ ಮೂಲಕ ರುದ್ರ ಪಠಣ ಹಬ್ಬದ ಆಚರಣೆಯ ವಿಶೇಷ.

ಅಭಿಷೇಕಪ್ರಿಯ ಎಂದೇ ಖ್ಯಾತನಾದ ಶಿವನಿಗೆ ದಿನವಿಡಿ ಹಾಲು, ಜೇನುತುಪ್ಪ ಹಾಗೂ ನೀರಿನ ಅಭಿಷೇಕ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಶಿವಲಿಂಗಕ್ಕೆ ಅಭಿಷೇಕ ಮಾಡಲಾಗುತ್ತದೆ. ಬಿಲ್ವಪತ್ರೆ, ತುಳಸಿ, ಶ್ರೀ ಗಂಧ, ಹಾಲು, ಜೇನುತುಪ್ಪಗಳಿಂದ ಅಭಿಷೇಕ ನಡೆಯುತ್ತದೆ. ಶಿವ ಪಂಚಾಕ್ಷರಿ ಮಂತ್ರ "ಓಂ ನಮ: ಶಿವಾಯ", ಹರ ಹರ ಮಹಾದೇವ, ಶಂಭೋ ಶಂಕರ...ಶಿವದೇವಾಲಯಗಳಲ್ಲಿ ಮಾರ್ದನಿಸುತ್ತದೆ. ನಾಲ್ಕು ಆಯಾಮಗಳ ರುದ್ರಪಠಣ, ಶಿವರಾತ್ರಿ ಪೂಜೆಯ ವಿಶೇಷ. ಶಿವಪುರಾಣದ ಪ್ರಕಾರ ರುದ್ರ ಹಾಗೂ ಚಮೆಗಳ ಪಠಣ ಶಿವನಿಗೆ ಅಚ್ಚುಮೆಚ್ಚು. ದೇವಾಲಯಗಳಲ್ಲಿ ಸಂಜೆ 6 ಗಂಟೆಯಿಂದ ಮೊದಲ್ಗೊಂಡು ಮುಂಜಾನೆ 6 ಗಂಟೆಯವರೆಗೆ ರುದ್ರಪಠಣದ ಮೂಲಕ ಶಿವ ಸ್ತುತಿ, ಜಾಗರಣೆ ನಡೆಯುತ್ತದೆ. ಪ್ರತಿ 3 ಗಂಟೆಗೊಮ್ಮೆ ಮಂಗಳಾರತಿ ಮಾಡಲಾಗುತ್ತದೆ. ಬೆಳಗ್ಗೆ 6 ಗಂಟೆಗೆ ಮಹಾಮಂಗಳಾರತಿ ಆಚರಣೆ ಮೂಲಕ ಜಾಗರಣೆ ಮುಕ್ತಾಯಗೊಳ್ಳುತ್ತದೆ. ಮೊದಲನೆಯ ಆಯಾಮದಲ್ಲಿ ಹಾಲು, ಎರಡನೆಯ ಆಯಾಮದಲ್ಲಿ ಮೊಸರು, ಮೂರನೆಯ ಆಯಾಮದಲ್ಲಿ ತುಪ್ಪ ಹಾಗೂ ನಾಲ್ಕನೆಯ ಆಯಾಮದಲ್ಲಿ ಜೇನುತುಪ್ಪಗಳಿಂದ ಶಿವನಿಗೆ ಅಭಿಷೇಕ ಮಾಡುವ ಪದ್ಧತಿಯೂ ಕೆಲವೆಡೆ ಇದೆ.

ಶಿವನನ್ನು ಪ್ರತಿದಿನ ಧ್ಯಾನಿಸುವ ಮೂಲಕ ನಮ್ಮ ಹೃದಯ ಶಿವನನ್ನು ಜಾಗೃತ ಸ್ಥಿತಿಯಲ್ಲಿಡುವುದೆ ಮಹಾಶಿವರಾತ್ರಿ ಪ್ರಮುಖ ಸಂದೇಶವಾಗಿದೆ.

**– ಮಂಜುನಾಥ್ ನಾಯ್ಕ್, ಹಿರಿಯ ಪತ್ರಕರ್ತರು, ಬೆಂಗಳೂರು.**

# ಪತ್ತಿನ ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಸಮರ್ಪಕ ಬಂಡವಾಳ ಹೊಂದುವ ಅವಶ್ಯಕತೆ, ಪ್ರಾಮುಖ್ಯತೆ



▸▸ ಶಶಿಧರ ಎಲೆ
ಸಹಕಾರ ಸಂಘಗಳ ಅಪರ ನಿಬಂಧಕರು (ನಿ)

ಸಿ.ಆರ್.ಎ.ಆರ್.ನ ವಿಸ್ತೃತರೂಪ ವಿವರಿಸುವಂತೆ, ಸಂಸ್ಥೆಯ ಆಸ್ತಿ ಜವಾಬ್ದಾರಿ ತಃಖ್ತೆ (ಅಡಾವೆ ಪತ್ರಿಕೆ) ಯಲ್ಲಿನ ಅಂಕಿ ಅಂಶಗಳ ಆಧಾರವಾಗಿ, ಅದರ 'ತೊಡಕು ತೂಕ ಆಸ್ತಿಗೆ ಬಂಡವಾಳದ ಅನುಪಾತ'. ಇಲ್ಲಿ ಬಳಸಿರುವ ಪದ ಪುಂಜಗಳ ಅರ್ಥವನ್ನು ತಿಳಿಯಬೇಕು. 'ತೊಡಕು ತೂಕ ಆಸ್ತಿ' ಎಂದರೇನು? (ರಿಸ್ಕ್ ವೈಟೆಡ್ ಅಸೆಟ್). ಸಂಸ್ಥೆಯು ನಡೆಸುವ ಪ್ರತಿ ವ್ಯವಹಾರವೂ ತೊಡಕು (ರಿಸ್ಕ್) ನಿಂದ ಕೂಡಿರುತ್ತದೆ. 'ತೊಡಕು' ಎಂದರೆ ಸಂಭವನೀಯ ನಷ್ಟ. ತೊಡಕಿಲ್ಲದೇ ಯಾವುದೇ ವ್ಯವಹಾರವನ್ನು ಮಾಡಲಾಗುವುದಲ್ಲ. ತೊಡಕು ಅನಿವಾರ್ಯ.

ಪತ್ತಿನ ಸಹಕಾರ ಸಂಘಗಳು ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಸದಸ್ಯರಿಂದ ಠೇವಣಿ ಸಂಗ್ರಹಿಸುವುದು ಮತ್ತು ಸದಸ್ಯರಿಗೆ ಸಾಲ ನೀಡುವ ಮತ್ತು ಇತರೆಡೆ ಹೂಡಿಕೆ ಮಾಡುವ ಚಟುವಟಿಕೆಯಲ್ಲಿ ತೊಡಗಿಸಿ ಕೊಂಡಿವೆ. ಅಂದರೆ, ಇದೂ ಕೂಡ ಸಂಘದೊಳಗಿನ ಬ್ಯಾಂಕಿಂಗ್ ಚಟುವಟಿಕೆ. ಬ್ಯಾಂಕ್‌ಗಳು ರಿಸರ್ವ್ ಬ್ಯಾಂಕ್ ನಿಂದ ಪರವಾನಗಿ ಪಡೆಯುವುದರಿಂದ ಸಾರ್ವಜನಿಕರಿಂದ ಠೇವಣಿ ಸ್ವೀಕರಿಸಲು ಮತ್ತು ಸಾರ್ವಜನಿಕರಿಗೆ ಸಾಲ ನೀಡಲು ಅರ್ಹತೆ ಪಡೆದರುತ್ತವೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳು, ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಬ್ಯಾಂಕ್ ಗಳು, ಈ ಚಟುವಟಿಕೆಯನ್ನು ಸದಸ್ಯರೊಂದಿಗೆ ಮಾತ್ರ ನಡೆಸುತ್ತಿವೆ. ಈ ಸಂಸ್ಥೆಗಳಿಗೆ 'ನಬಾರ್ಡ್' 'ಸಮರ್ಪಕ ಬಂಡವಾಳ' ಅಥವ 'ತೊಡಕು ತೂಕ ಸಹಿತ ಆಸ್ತಿಗೆ ಬಂಡವಾಳದ ಅನುಪಾತ' ವನ್ನು ನಿಗದಿಪಡಿಸಿದೆ. ಅದು ಇಂಗ್ಲಿಷನಲ್ಲಿ 'ಕ್ಯಾಪಿಟಲ್ ಟು ರಿಸ್ಕ್ ವೈಟೆಡ್ ಅಸೆಟ್ ರೇಶಿಯೋ' (ಸಿ.ಆರ್.ಎ.ಆರ್). ಅಲ್ಲದೆ ಜಿ.ಕೇ.ಸ. ಬ್ಯಾಂಕ್, ರಾಜ್ಯ ಸ. ಬ್ಯಾಂಕ್‌ಗಳಿಗೂ ನಿಗದಿಪಡಿಸಿದೆ. ಇದು ಶೇ 9. ಹಾಗೂ ಶೇ 12 ರಷ್ಟನ್ನು ಹೊಂದುವ ನೀರಿಕ್ಷೆ ವ್ಯಕ್ತಪಡಿಸಲಾಗಿದೆ. ಇದು ಸಂಸ್ಥೆಯ ಆರ್ಥಿಕ ಆರೋಗ್ಯದ ಪರಿಸ್ಥಿತಿಯ ಧ್ಯೋತಕವಾಗಿರುತ್ತದೆ. ಇದರಿಂದ ಸಂಸ್ಥೆಯು ಮುಂದೆ ಕಾಣಲಾರದ ನಷ್ಟಗಳು, ತೊಡಕುಗಳು ಬಂದಾಗ ಅದನ್ನು ತಡೆದುಕೊಳ್ಳುವ ಶಕ್ತಿಯನ್ನು ಹೊಂದಿರುತ್ತದೆ. ಇದರಿಂದ ಠೇವಣಿದಾರರ, ಸಾಲ ನೀಡುವವರ ವಿಶ್ವಾಸಕ್ಕೆ ಪಾತ್ರರಾಗಬಹುದು. ಆದುದರಿಂದ ಈ ನೀತಿಯನ್ನು ಪತ್ತಿನ ಸಹಕಾರ ಸಂಘಗಳು ಮತ್ತು ವಿವಿದೋದ್ದೇಶ ಸಹಕಾರ ಸಂಘಗಳು ಅಳವಡಿಸಿಕೊಳ್ಳುವುದು ತಮ್ಮ ಉತ್ತಮ ಕಾರ್ಯಾಚರಣೆ ದೃಷ್ಟಿಯಿಂದ ಅಗತ್ಯ.

ಹಾಗಾದರೆ ಸಮರ್ಪಕ ಬಂಡವಾಳ ಅಥವಾ 'ಕ್ಯಾಪಿಟಲ್ ಅಡಿಕ್ವೆಸಿ' ಅಥವಾ ಸಿ.ಆರ್.ಎ.ಆರ್. ಎಂದರೇನು? ಎಂಬ ಪ್ರಶ್ನೆ ಮೂಡುವುದು ಸಹಜ. ಪ್ರಾ.ಕೃ.ಪ.ಸ.ಸಂ.ಗಳ, ಪ್ರಾ.ಸ.ಕ್ರ. ಮತ್ತು ಗ್ರಾ.ಅ. ಬ್ಯಾಂಕಗಳ ಲೆಕ್ಕ ಪರಿಶೋಧನಾ ವರದಿಗಳಲ್ಲಿ ಆಯಾ ಆರ್ಥಿಕ ವರ್ಷದ ಅಂತಿಮ ಲೆಕ್ಕ ಆಧರಿಸಿ, ಇದು ಶೇ. ಎಷ್ಟಿದೆ ಎಂದು ನಮೂದಿಸಲಾಗುತ್ತದೆ. ಅದರಂತೆ, ಸಹಕಾರ ಬ್ಯಾಂಕ್‌ಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ನಮೂದಿಸುವುದು ಕಡ್ಡಾಯವಾಗಿರುತ್ತದೆ. ಆದುದರಿಂದ ಇದರ ಅರ್ಥ ಅರಿಯುವುದು ಅಷ್ಟೇ ಮುಖ್ಯವಾಗಿರುತ್ತದೆ.

ಸಿ.ಆರ್.ಎ.ಆರ್.ನ ವಿಸ್ತೃತರೂಪ ವಿವರಿಸುವಂತೆ, ಸಂಸ್ಥೆಯ ಆಸ್ತಿ ಜವಾಬ್ದಾರಿ ತಃಖ್ತೆ (ಅಡಾವೆ ಪತ್ರಿಕೆ) ಯಲ್ಲಿನ ಅಂಕಿ ಅಂಶಗಳ ಆಧಾರವಾಗಿ, ಅದರ 'ತೊಡಕು ತೂಕ ಆಸ್ತಿಗೆ ಬಂಡವಾಳದ ಅನುಪಾತ'. ಇಲ್ಲಿ ಬಳಸಿರುವ ಪದ ಪುಂಜಗಳ ಅರ್ಥವನ್ನು ತಿಳಿಯಬೇಕು. 'ತೊಡಕು ತೂಕ ಆಸ್ತಿ' ಎಂದರೇನು? (ರಿಸ್ಕ್ ವೈಟೆಡ್ ಅಸೆಟ್). ಸಂಸ್ಥೆಯು ನಡೆಸುವ ಪ್ರತಿ ವ್ಯವಹಾರವೂ ತೊಡಕು (ರಿಸ್ಕ್) ನಿಂದ ಕೂಡಿರುತ್ತದೆ. 'ತೊಡಕು' ಎಂದರೆ ಸಂಭವನೀಯ ನಷ್ಟ. ತೊಡಕಿಲ್ಲದೇ ಯಾವುದೇ ವ್ಯವಹಾರವನ್ನು ಮಾಡಲಾಗುವುದಲ್ಲ. ತೊಡಕು ಅನಿವಾರ್ಯ. ಆದರೆ ಎಷ್ಟು ತೊಡಕನ್ನು ತೆಗೆದುಕೊಳ್ಳಲಾಗಿದೆ ಎಂಬುದನ್ನು ಆಧರಿಸಿ ಆ ಆಸ್ತಿಗೆ 'ತೊಡಕು ತೂಕ'ವನ್ನು ಸೇರಿಸಲಾಗುತ್ತದೆ. (ರಿಸ್ಕ್ ವೈಟ್). ಆಸ್ತಿಯ ಆರೋಗ್ಯ ಗುಣಮಟ್ಟದ್ದಾಗಿದ್ದರೆ ಕಡಿಮೆ ತೊಡುಕು ತೂಕವಿರುತ್ತದೆ. ಆಸ್ತಿಯ ಆರೋಗ್ಯ ಕಳಪೆ ಮಟ್ಟದಲ್ಲಿದ್ದರೆ ಆಸ್ತಿಯ ತೊಡಕು ತೂಕ ಅಧಿಕವಾಗಿರುತ್ತದೆ. ಅದು ಕಾರ್ಯನಿರತವಲ್ಲದ ಆಸ್ತಿ (ಎನ್.ಪಿ.ಎ– ನಾನ್ ಪರ್ಫಾಮಿಂಗ್ ಅಸೆಟ್) ಆದಷ್ಟು ತೂಕ ಅಧಿಕಗೊಳ್ಳುತ್ತದೆ. ಭಾರತೀಯ ರಿಸರ್ವ್ ಬ್ಯಾಂಕ್ ತೊಡಕು ತೂಕದ ಬಗ್ಗೆ ಪ್ರತಿ ವರ್ಷ ನಿಗದಿಪಡಿಸಿ ಸುತ್ತೋಲೆ ಹೊರಡಿಸುತ್ತದೆ. ಲೇಖನದ ಜೊತೆ ಆ ಕೋಷ್ಟಕವನ್ನು ಒದಗಿಸಿದೆ. ಅದರಂತೆ ತೊಡಕು ತೂಕ ಸೇರಿಸಿದಾಗ ಆಸ್ತಿಯ ಒಟ್ಟು ಮೊತ್ತ ಏರಿಕೆಯಾಗುತ್ತದೆ.

ಇಲ್ಲಿ 'ಬಂಡವಾಳ' ವೆಂದರೇನು? 'ಬಂಡವಾಳ' ವೆಂದರೆ 'ಸ್ವಂತ ಬಂಡವಾಳ' (ಓನ್ ಕ್ಯಾಪಿಟಲ್ ), ಇದು ಸಂಸ್ಥೆಯ ಪಾವತಿಯಾದ ಷೇರು ಬಂಡವಾಳ ಮತ್ತು ಸ್ವಂತ ನಿಧಿಗಳನ್ನು ಒಳಗೊಳ್ಳುತ್ತದೆ. ಇದಕ್ಕೆ ಟಯರ್ – 1, ಬಂಡವಾಳ ಎನ್ನಲಾಗುತದೆ. ಪಾವತಿಯಾದ ಷೇರು ಬಂಡವಾಳ ನಮ್ಮದೇ ಆಗಿರುತ್ತದೆ. ನಿಧಿಗಳು ನಮ್ಮ ಲಾಭದಿಂದ ಭವಿಷ್ಯಕ್ಕೆ ತೆಗೆದಿರಸಲಾದ ನಿಧಿಗಳು, ಅದು ಮೀಸಲು ನಿಧಿ (ಆಪದ್ಧನ ನಿಧಿ, ರಿಸರ್ವ್ ಫಂಡ್) ಆಗಿರುತ್ತದೆ. ಇದರ ಮೇಲೆ ಯಾವುದೇ ಋಣಭಾರವಿರಬಾರದು. 'ಆನ್ ಎನ್ ಕಂಬರ್ಡ್ ರಿಸರ್ವ್' ಇದನ್ನು ಮಾತ್ರ 'ಸ್ವಂತ ಬಂಡವಾಳ' ಎಂದು ಪರಿಗಣಿಸಲಾಗುತ್ತದೆ. ಇದರ ಅನುಪಾತ (ರೇಶಿಯೋ) ವನ್ನು ಈ ಕೆಳಕಂಡ ಕೋಷ್ಟಕದಂತೆ ಲೆಕ್ಕ ಹಾಕಲಾಗುವುದು.

**ಸ್ವಂತ ಬಂಡವಾಳ**

ಸಮರ್ಪಕ ಬಂಡವಾಳ = X 100

(ಸಿ.ಆರ್.ಎ. ಆರ್) ತೂಕ ಸಹಿತ ಆಸ್ತಿಯ ಒಟ್ಟು ಮೊತ್ತ


ಸ್ವಂತ ಬಂಡವಾಳ= ಪಾವತಿಯಾದ ಷೇರು ಬಂಡವಾಳ+ ಋಣಭಾರ ರಹಿತ ನಿಧಿಗಳು– ಕ್ರೋಡಿಕೃತ ನಷ್ಟಗಳು.

**ಸಹಕಾರ ಸಂಸ್ಥೆಗಳು ಸಮರ್ಪಕ ಬಂಡವಾಳ ಹೊಂದಲು ಅಳವಡಿಸ ಕೊಳ್ಳಬೇಕಾದ ಅವಶ್ಯ ತಂತ್ರಗಾರಿಕೆ :**

ಇದು ಕನಿಷ್ಟ ಶೇ 9. ಎಂದು ನೀರೀಕ್ಷಿಸಲಾಗಿದೆ. ಈ ಸಮರ್ಪಕ ಬಂಡವಾಳ ಹೊಂದಬೇಕಾದರೆ ಸಂಘದ ಜವಾಬ್ದಾರಿ ಕಡೆಯಲ್ಲಿನ ಸಂಗತಿಗಳು, ಸಂಪನ್ಮೂಲಗಳೂ ಆದ ಪಾವತಿಯಾದ ಷೇರು ಬಂಡವಾಳವು ಅಧಿಕವಾಗಿರಬೇಕಾಗುತ್ತದೆ. ಇದರ ಹೆಚ್ಚಳಕ್ಕಾಗಿ ಸಂಘವು ಅವಶ್ಯ ತಂತ್ರಗಾರಿಕೆಯನ್ನು ಅನುಸರಿಸಬೇಕಾಗುತ್ತದೆ. ಮೂಲವಾಗಿ ಷೇರು ಬಂಡಾಳದ ಮೊತ್ತ ಕಡಿಮೆ ಇದ್ದಲ್ಲಿ ಉಪನಿಯಮ ತಿದ್ದುಪಡಿಯೊಂದಿಗೆ ಅದನ್ನು ಅಧಿಕಗೊಳಿಸುವುದು, ಸದಸ್ಯತ್ವವನ್ನು ಹೆಚ್ಚಿಸುವುದು. ಸಾಲ ವಿತರಿಸುವಲ್ಲಿ ತಪ್ಪದೇ ಹೆಚ್ಚುವರಿ ಷೇರು ಸಂಗ್ರಹಿಸುವುದು. ನಿಧಿಗಳ ಸೃಷ್ಟಿಗೆ ಪ್ರಾಧಾನ್ಯತೆ ನೀಡಬೇಕು. ಕಾಯ್ದೆ ಪ್ರಕಾರ ಶೇ 25 ಕ್ಕೆ ಕಡಿಮೆ ಇಲ್ಲದಂತೆ ಮೀಸಲು ನಿಧಿಗೆ ಲಾಭದಲ್ಲಿ ತೆಗೆದಿರಿಸುವುದು ಎಂದಿದೆ. ಇದು ಸರ್ವ ಸದಸ್ಯರ ಸಭೆ ಅಧಿಕಾರವಾಗಿದ್ದು, ಆಡಳಿತ ಮಂಡಳಿಯೂ ಶೇ 25 ಕ್ಕಿಂತ ಹೆಚ್ಚಿಗೆ ಮೀಸಲು ನಿಧಿ ಸೃಜಿಸಲು ಅವಕಾಶವಿದ್ದು ಸರ್ವಸದಸ್ಯರ ಅನುಮೋದನೆಗೆ ಮಂಡಿಸಲು ಆಲೋಚಿಸಿ ಕ್ರಮವಿಡುವುದು ಸಂಸ್ಥೆಯ ಆರ್ಥಿಕ ಆರೋಗ್ಯದಷ್ಟಿಯಿಂದ ಅಗತ್ಯ. ಈ ಕ್ರಮ ನಿಧಿಗಳ ಮೇಲಿನ ವೆಚ್ಚವನ್ನು ಕಡಿಮೆಗೊಳಿಸುತ್ತದೆ. ಆಡಳಿತ ಆಸ್ತಿಯ ತೊಡಕು ತೂಕ ಸಹಿತ ಮೊತ್ತ ಕಡಿಮೆಗೊಳಿಸಿಕೊಳ್ಳಬೇಕು. ಎಂದರೆ ಆಸ್ತಿಯ ಆರೋಗ್ಯದ ಗುಣಮಟ್ಟ ಉತ್ತಮವಾಗಿರಬೇಕು. ಹೂಡಿಕೆಗಳು ಗಳಿಕೆ ತರುವಂತಹ, ತರುತ್ತಿರುವ ಹೂಡಿಕೆಗಳಾಗಬೇಕು. ಸಾಲ ಮತ್ತು ಮುಂಗಡಗಳ ವಲಯವು ಪತ್ತಿನ ಸಹಕಾರ ಸಂಘಗಳ, ಪತ್ತಿನ ವ್ಯವಹಾರ ನಡೆಸುತ್ತಿರುವ ವಿವಿದೋದ್ದೇಶ ಸಹಕಾರ ಸಂಘಗಳ ಪ್ರಮುಖ ಆಸ್ತಿಯಾಗಿರುವುದರಿಂದ ಇದರ ಆರೋಗ್ಯ ಅತಿಮುಖ್ಯ. ಎಂದರೆ ಸಾಲದ ವಸೂಲಾತಿ ಅತ್ಯುತ್ತಮವಾಗಿರಬೇಕು. ಕಾರ್ಯನಿರ್ವದಲ್ಲದ ಆಸ್ತಿ (ಎನ್.ಪಿ.ಎ) ಅತಿ ಕಡಿಮೆ ಇರಬೇಕು. ಅದಕ್ಕೆ ಅಗತ್ಯದಷ್ಟು ಅಕಾಶವನ್ನು ಕಲ್ಪಿಸಿರಬೇಕು. ಈ ಕ್ರಮಗಳಿಂದ ಸಂಘವು ಸಮರ್ಪಕ ಬಂಡವಾಳ ಹೊಂದಿ ಯಶಸ್ವಿ ಕಾರ್ಯಾಚರಣೆ ಸಾಧ್ಯವಾಗುತ್ತದೆ.

**ತೊಡಕು ತೂಕ ಆಸ್ತಿ ಕೋಷ್ಟಕ**

| ಕ್ರ.ಸಂ. | ಆಸ್ತಿ | ತೊಡಕು ತೂಕ ಶೇ. |
|---|---|---|
| 1. | ನಗದು ಶಿಲ್ಕು | 0 |
| 2. | ಬ್ಯಾಂಕಿನಿನಲ್ಲಿನ ಚಾಲ್ತಿ ಖಾತೆ | 20 |
| 3. | ಬ್ಯಾಂಕಿನಲ್ಲಿನ ಉಳಿತಾಯ ಖಾತೆ | 22.5 |
| 4. | ಬ್ಯಾಂಕ್ ಅಲ್ಲದೆ ಇತರೆ ಸಂಸ್ಥೆ | 22.5 |
| | **ಹೂಡಿಕೆಗಳು** | |
| 5. | ಸರ್ಕಾರದ ಭದ್ರತೆಗಳು | 2.5 |
| 6. | ಸಹಕಾರ ಸಂಸ್ಥೆಗಳ ಷೇರುಗಳು | 102.5 |
| 7. | ಮೀಸಲು ನಿಧಿ ಹೂಡಿಕೆ | 22.5 |
| 8. | ಬ್ಯಾಂಕಲ್ಲಿನ ನಿಶ್ಚಿತ ಠೇವಣಿಗಳು | 22.5 |
| 9. | ಸಣ್ಣ ಉಳಿತಾಯ ಪತ್ರಿಕೆಗಳು | 2.5 |
| 10. | ಭವಿಷ್ಯ ನಿಧಿ ಟ್ರಸ್ಟ್ / ಬ್ಯಾಂಕಿನಲ್ಲಿ ಠೇವಣಿ | 22.5 |
| 11. | ಮಾರುಕಟ್ಟೆ ಸ.ಸಂ. ಗಳಲ್ಲಿ ಠೇವಣಿ | 102.5 |
| | **ಸಾಲಗಳು ಮತ್ತು ಮುಂಗಡಗಳು** | |
| 12. | ಅಲ್ಪ ಅವಧಿ/ಮಧ್ಯಮ/ ದೀರ್ಘಾವಧಿ ಸಾಲಗಳು | ಶೇ 100 |
| 13. | ಸಿಬ್ಬಂದಿ ಮುಂಗಡಗಳು ರಕ್ಷಣೆ ಇದ್ದಲ್ಲಿ | 20 |
| | **ಅಂತಿಮ ದಾಸ್ತಾನು** | |
| 14. | ನಿವೇಶನ, ಕಟ್ಟಡ, ಗೋದಾಮು | 100 |
| 15. | ಕಂಪ್ಯೂಟರ್, ಮರ ಮುಟ್ಟು, ವಿದ್ಯುಚ್ಛಕ್ತಿ ಪರಿಕರಗಳು | 100 |
| 16. | ವಾಹನಗಳು | 100 |
| 17. | ಕೃಷಿ ಉಪಕರಣಗಳು | 100 |
| | **ಇತರೆ ಆಸ್ತಿಗಳು** | |
| 18. | ಕ್ರೋಡೀಕೃತ ಬಡ್ಡಿ ಆದರೆ ಸುಸ್ತಿಯಾಲ್ಲ | 100 |
| 19. | ಸುಸ್ಥಿ ಬಡ್ಡಿ | 100 |
| 20. | ಹೂಡಿಕೆ ಮೇಲೆ ಬಡ್ಡಿ ಬಾಕಿ | 100 |
| 21. | ಸಂಡ್ರಿ ಡೆಟರ್ಸ್ | 100 |
| 22. | ಇತರೆ ಬರ ಬೇಕಾದದ್ದು | 100 |
| 23. | ದುರುಪಯೋಗ ಮೊತ್ತ | 100 |
| 24. | ಮುಂಗಡ ಪಾವತಿಸಿದ ಖರ್ಚುಗಳು | 100 |



# ಸಹಕಾರ ಮಾರ್ಗದರ್ಶಿ :
# ಆಧುನಿಕ ಸಹಕಾರ ಚಳುವಳಿಯ ಉಗಮ

▶▶ **ಬಸವೇಗೌಡ,** ನಿವೃತ್ತ ಅಪರ ನಿಬಂಧಕರು ಹಾಗೂ ಅಧ್ಯಕ್ಷರು, ಕರ್ನಾಟಕ ಪ್ರಗತಿಪರ ಸಹಕಾರಿಗಳ ವೇದಿಕೆ (ರಿ.) ಬೆಂಗಳೂರು.

.........ಹಿಂದಿನ ಸಂಚಿಕೆಯಿಂದ

### ಅಭಿವೃದ್ಧಿ ಕ್ರಿಯಾ ಯೋಜನೆ (Development Action Plan - DAP)

ಜಿಲ್ಲಾ ಬ್ಯಾಂಕ್ ತನ್ನ ಸರ್ವತೋಮುಖ ಅಭಿವೃದ್ಧಿ ಸಾಧನೆಗಾಗಿ ವಾರ್ಷಿಕ ಸಾಧಿಸಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡ ಯೋಜನೆಯನ್ನು ಸಿದ್ದಪಡಿಸಿ ಅಪೆಕ್ಸ್ ಬ್ಯಾಂಕಿನೊಡನೆ ಒಡಂಬಡಿಕೆ ಮಾಡಿಕೊಂಡು ಅನುಷ್ಠಾನ ಮಾಡಬೇಕಾದ ಯೋಜನೆಯನ್ನು ಅಭಿವೃದ್ಧಿ ಕ್ರಿಯಾ ಯೋಜನೆ – DAP ಎಂದು ಕರೆಯಲಾಗುತ್ತದೆ. ಸಂಪನ್ಮೂಲ ವೃದ್ಧಿ, ಬೆಳೆ ಸಾಲ ಮತ್ತು ಕೃಷಿ ಸಂಬಂಧಿತ ಸಾಲಗಳು, ಕೃಷಿಯೇತರ ಸಾಲಗಳು, ಸಾಲ ವಸೂಲಾತಿ ನಿಧಿಯೇತರ ವ್ಯವಹಾರಗಳು, ಲಾಭಗಳಿಕೆ, ಸ್ವಂತ ನಿಧಿಗಳ ವೃದ್ಧಿ, ಇತ್ಯಾದಿ ಆರ್ಥಿಕ ಅಂಶಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸಿ ಅದನ್ನು ಸಾಧಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

### ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ (Karnataka State Cooperative Apex Bank Ltd)

ಇದರ ಕಾರ್ಯವ್ಯಾಪ್ತಿಯು ರಾಜ್ಯ ಮಟ್ಟದಾಗಿರುತ್ತದೆ. ಇದು ರಾಜ್ಯ ಮಟ್ಟದಲ್ಲಿ ಸಹಕಾರ ಕ್ಷೇತ್ರದ ಮಾತೃ ಹಣಕಾಸು ಸಂಸ್ಥೆಯಾಗಿರುತ್ತದೆ. ಡಿ.ಸಿ.ಸಿ. ಬ್ಯಾಂಕುಗಳು ಹಾಗೂ ರಾಜ್ಯ ಮಟ್ಟದ ಸಹಕಾರ ಸಂಸ್ಥೆಗಳು ಇದರ ಸದಸ್ಯ ಸಂಸ್ಥೆಗಳಾಗಿರುತ್ತದೆ. ಆರ್.ಬಿ.ಐನಿಂದ ಅನುಮತಿ ಪಡೆದು ಬ್ಯಾಂಕಿಂಗ್ ವ್ಯವಹಾರಗಳನ್ನು ನಡೆಸುತ್ತದೆ. ಸಹಕಾರ ಕಾಯ್ದೆ, ನಿಯಮ ಮತ್ತು ಬೈಲಾ ನಿಯಮಕ್ಕೆ ಅನುಸಾರ ಜಿಲ್ಲಾ ಬ್ಯಾಂಕುಗಳ ಪ್ರತಿನಿಧಿಗಳು ಚುನಾವಣೆ ಮೂಲಕ ಆಯ್ಕೆ ಆಗುವ ಆಡಳಿತ ಮಂಡಳಿ ಹಾಗೂ ಈ ಆಡಳಿತ ಮಂಡಳಿಯ ಸದಸ್ಯರೊಳಗಿನಿಂದ ಚುನಾಯಿತರಾಗುವ ಪದಾಧಿಕಾರಿಗಳಾದ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಬ್ಯಾಂಕಿನ ಆಡಳಿತವನ್ನು ನಿರ್ವಹಿಸುತ್ತಾರೆ. ವ್ಯವಸ್ಥಾಪಕ ನಿರ್ದೇಶಕರು ಹಾಗೂ ಇತರೆ ಅಧಿಕಾರಿ ಸಿಬ್ಬಂಧಿಗಳು ಬ್ಯಾಂಕಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ. ಪ್ರಸ್ತುತ ಆಡಳಿತ ಮಂಡಳಿ ಸದಸ್ಯರ ಹಾಗೂ ಪದಾಧಿಕಾರಿಗಳ ಅವಧಿಯು ಐದು ವರ್ಷಗಳಾಗಿರುತ್ತದೆ.

ಅಪೆಕ್ಸ್ ಬ್ಯಾಂಕಿನ ಮುಖ್ಯ ಉದ್ದೇಶವು ಜಿಲ್ಲಾ ಬ್ಯಾಂಕುಗಳು ಮತ್ತು ಫ್ಯಾಕ್ಸ್‌ಗಳ ಮೂಲಕ ಕೃಷಿ ಸಾಲಗಳನ್ನು ನೀಡುವುದಾಗಿರುತ್ತದೆ. ರಾಷ್ಟ್ರಮಟ್ಟದ ಹಣಕಾಸು ಸಂಸ್ಥೆಯಾದ ರಾಷ್ಟ್ರೀಯ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ನಿಂದ ತರುವ ಬೆಳೆ ಸಾಲ ಮತ್ತು ಮದ್ಯಮಾವಧಿ ಕೃಷಿ ಸಾಲಗಳನ್ನು ಜಿಲ್ಲಾ ಬ್ಯಾಂಕುಗಳಿಗೆ ಮಂಜೂರು ಮಾಡುತ್ತದೆ. ಜೊತೆಗೆ ತನ್ನ ಸ್ವಂತ ಬಂಡವಾಳದಿಂದಲೂ ಸಹ ಬೆಳೆ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಒದಗಿಸುತ್ತದೆ. ಅಪೆಕ್ಸ್ ಬ್ಯಾಂಕ್ ಜಿಲ್ಲಾ ಬ್ಯಾಂಕುಗಳಿಗೆ, ಇತರೆ ಸಹಕಾರ ಸಂಸ್ಥೆಗಳಿಗೆ ಹಾಗೂ ಖಾಸಗಿಯವರಿಗೂ ಕೃಷಿಯೇತರ ಸಾಲಗಳನ್ನು ನಬಾರ್ಡ್ ಮಾರ್ಗಸೂಚಿಗಳ ಮತ್ತು ಬ್ಯಾಂಕಿಂಗ್ ನಿಯಮಗಳ ಚೌಕಟ್ಟಿನಲ್ಲಿ ನೀಡುತ್ತದೆ.

ಅಪೆಕ್ಸ್ ಬ್ಯಾಂಕ್ ದುಡಿಯುವ ಬಂಡವಾಳವು ಸದಸ್ಯ ಸಂಸ್ಥೆಗಳಿಂದ ಪಾವತಿಯಾದ ಷೇರು ಧನ, ಸ್ವಂತ ನಿಧಿಗಳು, ಠೇವಣಿಗಳು ಹಾಗೂ ನಬಾರ್ಡ್‌ನಿಂದ ಪಡೆಯುವ ಸಾಲಗಳಿಂದ ಕೂಡಿರುತ್ತದೆ. ನಬಾರ್ಡ್ ಅಪೆಕ್ಸ್ ಬ್ಯಾಂಕ್‌ಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಹಾಗೂ ಕಾಲಕಾಲಕ್ಕೆ ತನಿಖೆಯನ್ನು ನಡೆಸುತ್ತದೆ.

### ರಾಜ್ಯ ಸಹಕಾರ ಬ್ಯಾಂಕುಗಳ ರಾಷ್ಟ್ರೀಯ ಒಕ್ಕೂಟ (National Federation of State Co-operative Banks - NFSCOB)

ಇದು ರಾಜ್ಯ ಸಹಕಾರ ಬ್ಯಾಂಕುಗಳ ಅಂದರೆ, ಅಪೆಕ್ಸ್ ಬ್ಯಾಂಕುಗಳ ರಾಷ್ಟ್ರ ಮಟ್ಟದ ಒಕ್ಕೂಟವಾಗಿದ್ದು ಇದರ ಕೇಂದ್ರ ಸ್ಥಾನವು ಮುಂಬೈನಲ್ಲಿರುತ್ತದೆ. ಇದು ಕೇಂದ್ರ ಸರ್ಕಾರ, ಆರ್‌ಬಿಐ, ನಬಾರ್ಡ್ ಇತರೆ ಸಂಸ್ಥೆಗಳೊಡನೆ ಅಪೆಕ್ಸ್ ಬ್ಯಾಂಕುಗಳ ಪರವಾಗಿ ವ್ಯವಹರಿಸುತ್ತದೆ. ಅಲ್ಲದೆ ಕಾಲಕಾಲಕ್ಕೆ ಅಪೆಕ್ಸ್ ಬ್ಯಾಂಕುಗಳ ರಾಷ್ಟ್ರ ಮಟ್ಟದ ಸಭೆಯನ್ನು ಏರ್ಪಡಿಸಿ ಚರ್ಚಿಸಿ ಸೂಕ್ತ ಮಾರ್ಗದರ್ಶನ ನೀಡುತ್ತದೆ, ಕುಂದು ಕೊರತೆಗಳನ್ನು ವಿಮರ್ಷಿಸಿ ಪ್ರಗತಿ ಚಿಂತನೆ ನಡೆಸುತ್ತದೆ.

### ದೀರ್ಘಾವಧಿ ಕೃಷಿ ಪತ್ತಿನ ವ್ಯವಸ್ಥೆ/ರಚನೆ (Long Term Agricultural Credit Structure)

ಈ ಸಾಲ ವಿತರಣಾ ವ್ಯವಸ್ಥೆಯು ಎರಡು ಹಂತಗಳಿಂದ ಕೂಡಿರುತ್ತದೆ – ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಹಾಗೂ ತಾಲ್ಲೂಕು ಮಟ್ಟದಲ್ಲಿ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್. ಈ ಬ್ಯಾಂಕುಗಳು ಕೃಷಿ ಕ್ಷೇತ್ರಕ್ಕೆ ಹೂಡಿಕೆ ಸಾಲಗಳನ್ನು (Investment Credit) ಸಾಲಗಳನ್ನು 7 ರಿಂದ 15 ವರ್ಷಗಳ ಅವಧಿಗೆ ನೀಡುತ್ತವೆ. ಈ ಕಾರಣದಿಂದಲೇ ಇವರುಗಳನ್ನು ದೀರ್ಘಾವಧಿ ಕೃಷಿ ಪತ್ತಿನ ಬ್ಯಾಂಕುಗಳು ಎಂದು ಕರೆಯಲಾಗುತ್ತದೆ. ಇವುಗಳು ಬ್ಯಾಂಕಿಂಗ್ ವ್ಯವಹಾರ ನಡೆಸುವುದಕ್ಕೆ ಅನುಮತಿ ಇರುವುದಿಲ್ಲ.

### ಅಭಿವೃದ್ಧಿ ಕ್ರಿಯಾ ಯೋಜನೆ (Development Action Plan - DAP)

ಅಪೆಕ್ಸ್ ಬ್ಯಾಂಕ್ ತನ್ನ ಸರ್ವತೋಮುಖ ಅಭಿವೃದ್ಧಿ ಸಾಧನೆಗಾಗಿ ವಾರ್ಷಿಕ ಸಾಧಿಸಬೇಕಾದ ಎಲ್ಲಾ ಅಂಶಗಳನ್ನು ಒಳಗೊಂಡ ಯೋಜನೆಯನ್ನು ಸಿದ್ದಪಡಿಸಿ ನಬಾರ್ಡ್ ಒಡನೆ ಒಡಂಬಡಿಕೆ ಮಾಡಿಕೊಂಡು ಅನುಷ್ಠಾನ ಮಾಡಬೇಕಾದ ಯೋಜನೆಯನ್ನು ಅಭಿವೃದ್ಧಿ ಕ್ರಿಯಾ ಯೋಜನೆ – ಆಂಕ ಎಂದು ಕರೆಯಲಾಗುತ್ತದೆ. ಸಂಪನ್ಮೂಲ ವೃದ್ಧಿ, ಬೆಳೆ ಸಾಲ ಮತ್ತು ಕೃಷಿ ಸಂಬಂಧಿತ ಸಾಲಗಳು, ಕೃಷಿಯೇತರ ಸಾಲಗಳು, ಸಾಲ ವಸೂಲಾತಿ ನಿಧಿಯೇತರ ವ್ಯವಹಾರಗಳು, ಲಾಭಗಳಿಕೆ, ಸ್ವಂತ ನಿಧಿಗಳ ವೃದ್ಧಿ, ಇತ್ಯಾದಿ ಆರ್ಥಿಕ ಅಂಶಗಳನ್ನು ಒಳಗೊಂಡ ವಾರ್ಷಿಕ ಯೋಜನೆಯನ್ನು ಸಿದ್ದಪಡಿಸಿ ಅದನ್ನು ಸಾಧಿಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ.

### ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ (Primary Cooperative Agricultural & Rural

### Developmental Banks – P.C.A.R.D.Bs)

ಇವುಗಳ ಕಾರ್ಯವ್ಯಾಪ್ತಿ ತಾಲ್ಲೂಕು ಮಟ್ಟದಾಗಿರುತ್ತದೆ. ಇವುಗಳಲ್ಲಿ ವ್ಯಕ್ತಿಗಳು ಮಾತ್ರ ಸದಸ್ಯರಾಗಿರುತ್ತಾರೆ. ಮೊದಲಿಗೆ ಪ್ರಾಥಮಿಕ ಸಹಕಾರ ಭೂ ಅಡಮಾನ ಬ್ಯಾಂಕ್‌ಗಳೆಂದು ಪ್ರಾರಂಭವಾಗಿ ರೈತರ ಭೂಮಿಯ ಅಡವಿನ ಆಧಾರದ ಮೇಲೆ ಸಾಲಗಳನ್ನು ನೀಡುತ್ತಿದ್ದವು. ಈ ಕಾರಣದಿಂದಲೇ ಭೂ ಅಡಮಾನ ಬ್ಯಾಂಕ್‌ಗಳೆಂದು ಕರೆಯಲಾಯಿತು. ಇವುಗಳ ಹೆಸರನ್ನು 1965ರಲ್ಲಿ ಪ್ರಾಥಮಿಕ ಸಹಕಾರ ಭೂ ಅಭಿವೃದ್ಧಿ ಬ್ಯಾಂಕ್‌ಗಳು (P.L.D.Bs) ಎಂದು ಬದಲಾಯಿಸಿ ತದನಂತರ 1984ರಿಂದ ಈಚೆಗೆ ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್ ಎಂದು ಕರೆಯಲಾಗುತ್ತಿದೆ. ಕೃಷಿಕರು ಮತ್ತು ಗ್ರಾಮೀಣಾಭಿವೃದ್ಧಿ ಇವುಗಳ ಮುಖ್ಯ ಧ್ಯೇಯವಾಗಿರುತ್ತದೆ ಹಾಗೂ ಅದಕ್ಕೆ ಪೂರಕವಾಗಿ ಹಲವು ಬಗೆಯ ಕೃಷಿ ಹೂಡಿಕೆ ಸಾಲಗಳನ್ನು ಗ್ರಾಮೀಣ ಜನರಿಗೆ ಒದಗಿಸುತ್ತಿವೆ. ಈ ಬ್ಯಾಂಕುಗಳು 7 ರಿಂದ 15 ವರ್ಷಗಳ ಅವಧಿಯ ಸಾಲಗಳನ್ನು ಭೂ ಅಭಿವೃದ್ಧಿ, ನೀರಾವರಿ, ಪಂಪ್ ಸೆಟ್, ಕೃಷಿ ಉಪಕರಣ, ತೋಟಗಾರಿಕೆ, ಕೊಳವೆ ಬಾವಿ, ಗ್ರಾಮೀಣ ಭಾಗದಲ್ಲಿ ಮನೆ/ಕೊಟ್ಟಿಗೆ ನಿರ್ಮಾಣ, ಹೈನುಗಾರಿಕೆ, ಪೆನ್ಸಿಂಗ್, ಇತ್ಯಾದಿ ಹಲವು ಬಗೆಯ ಸಾಲಗಳನ್ನು ನೀಡುತ್ತವೆ.

ಈ ಬ್ಯಾಂಕುಗಳ ಆರ್ಥಿಕ ಸಂಪನ್ಮೂಲವು ಸದಸ್ಯರಿಂದ ಪಡೆದ ಷೇರು ಬಂಡವಾಳ, ಸ್ವಂತ ನಿಧಿಗಳು, ಠೇವಣಿ, ರಾಜ್ಯ ಮಟ್ಟದ ಬ್ಯಾಂಕಿನಿಂದ ಪಡೆಯುವ ಸಾಲಗಳು ಸೇರಿಸುತ್ತವೆ. ಇದರ ಆಡಳಿತವನ್ನು ಸಹಕಾರ ಕಾಯಿದೆ ಮತ್ತು ಬೈಲಾ ನಿಯಮಗಳ ಪ್ರಕಾರ ಸದಸ್ಯರಿಂದ ಚುನಾಯಿತವಾಗುವ ಆಡಳಿತ ಮಂಡಳಿ ಹಾಗೂ ಈ ಆಡಳಿತ ಮಂಡಳಿಯ ಸದಸ್ಯರೊಳಗಿಂದ ಚುನಾಯಿತರಾಗುವ ಅಧ್ಯಕ್ಷರು, ಉಪಾಧ್ಯಕ್ಷರು (ಪದಾಧಿಕಾರಿಗಳು) ನಿರ್ವಹಿಸುತ್ತಾರೆ. ಕಾರ್ಯದರ್ಶಿ ಹಾಗೂ ಇತರೆ ಸಿಬ್ಬಂದಿಯು ಬ್ಯಾಂಕಿನ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾರೆ, ಪ್ರಸ್ತುತ 174 ಪ್ರಾಥಮಿಕ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕ್‌ಗಳಿವೆ.

ಮುಂದುವರೆಯುವುದು...


## SAHAKARA VARTHA PATRIKE
## Form IV (See rule-8)

| | | | |
|---|---|---|---|
| 1. | Place of Publication | : | Bangalore, Karnataka |
| 2. | Periodicity of its Publications | : | Monthly |
| 3. | Printers Name | : | Biligiri Printers |
| | Whether Citizen of India | | Yes |
| | If foreigner, State the country of origin | | No.138, $2^{nd}$ main, $8^{th}$ cross, |
| | Address | | Chamaraj pet, Bangalore-560018 |
| 4. | Editors Name | : | K S Guruprasad |
| | Whether Citizen of India | | Yes |
| | If foreigner, State the country of | | No.16, $1^{st}$ floor, $1^{st}$ cross, |
| | origin Address | | Link Road, Malleshwaram, |
| | | | Bangalore-560003 |
| 5. | Name and Address of Individuals who own | : | Karnataka state co operative |
| | The Newspaper and partners or share | : | credit societies Federation Ltd., |
| | holders holding more than percent | | No.16, $1^{st}$ floor, $1^{st}$ cross, Link Road, |
| | of the total capital | | Malleshwaram, Bangalore-560003 |

I **K.S. Guruprasad** here by declare that the particulars given are true to the best of my knowledge

Sd/-

Bangalore
**K.S. Guruprasad**

$28^{th}$, February 2022
**Signature of the Publisher / Editor**

# ಸ್ಪರ್ಧಾತ್ಮಕ ಸಹಕಾರಿ ಪ್ರಶ್ನೋತ್ತರಗಳು – ಓದಿ ಉತ್ತರಿಸಿ

**1. ಸಹಕಾರ ಸಂಘಗಳಲ್ಲಿ ಮರುಲೆಕ್ಕಪರಿಶೋಧನೆಗೆ ತೀರ್ಮಾನಿಸುವ ಅಧಿಕಾರ ................. ದತ್ತವಾಗಿದೆ.**

ಎ) ಸರ್ವಸದಸ್ಯರ ಸಭೆ

ಬಿ) ಸಹಕಾರ ಸಂಘಗಳ ಲೆಕ್ಕಪರಿಶೋಧನಾ ನಿರ್ದೇಶಕರು

ಸಿ) ಸರ್ವಸದಸ್ಯರ ಸಭೆ ಮತ್ತು ರಾಜ್ಯ ಸರ್ಕಾರ

ಡಿ) ಯಾವುದು ಅಲ್ಲ

**2. ಲೆಕ್ಕಪರಿಶೋಧಕರ ಸಂಭಾವನೆ ನಿಗದಿಪಡಿಸುವ ಅಧಿಕಾರ ............... ದತ್ತವಾಗಿದೆ.**

ಎ) ರಾಜ್ಯ ಸರ್ಕಾರ

ಬಿ) ಲೆಕ್ಕಪರಿಶೋಧಕರ ನಿರ್ದೇಶಕರು

ಸಿ) ಸರ್ವಸದಸ್ಯರ ಸಭೆ

ಡಿ) ಆಡಳಿತ ಮಂಡಲಿ

**3. ಪ್ರತಿಯೊಂದು ಸಹಕಾರ ಸಂಘವು, ಕನಿಷ್ಠ .......................... ತನ್ನ ಲೆಕ್ಕಪತ್ರಗಳ ಆಡಿಟ್ ಮಾಡಿಸುವುದು ಕಡ್ಡಾಯವಾಗಿದೆ.**

ಎ) ಪ್ರತಿ ಆರು ತಿಂಗಳಿಗೊಮ್ಮೆ

ಬಿ) ಪ್ರತಿ ವರ್ಷಕ್ಕೊಮ್ಮೆ

ಸಿ) ಪ್ರತಿ ಮೂರು ತಿಂಗಳಿಗೊಮ್ಮೆ

ಡಿ) ಪ್ರತಿ ಎರಡು ತಿಂಗಳಿಗೊಮ್ಮ

**4. ಆಡಿಟ್ ಕಾರ್ಯನಿರ್ವಹಿಸಲು, ಆಡಿಟರ್ ಮತ್ತು ಆಡಿಟ್‌ಫರ್ಮ್‌ಗಳ ಪಟ್ಟಿ ಅನುಮೋದಿಸುವ ಅಧಿಕಾರ ............. ಇವರಲ್ಲಿ ದತ್ತವಾಗಿದೆ.**

ಎ) ರಾಜ್ಯ ಸರ್ಕಾರ

ಬಿ) ಸಂಯುಕ್ತ ಸಹಕಾರಿ

ಸಿ) ರಾಜ್ಯ ಸರ್ಕಾರದಿಂದ ಅಧಿಕೃತಗೊಂಡ ಪ್ರಾಧಿಕಾರ

ಡಿ) ಸರ್ವಸದಸ್ಯರ ಸಭೆ

**5. ಸಹಕಾರ ಸಂಘಗಳಲ್ಲಿ ಆಡಿಟ್ ವರದಿಯನ್ನು ನಿಗದಿತ ಅವಧಿಯೊಳಗಾಗಿ ಸಾಮಾನ್ಯ ಸಭೆಗೆ ಮಂಡಿಸುವುದು ..................... ರವರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ.**

ಎ) ಮುಖ್ಯಕಾರ್ಯನಿರ್ವಾಹಕ

ಬಿ) ಅಧ್ಯಕ್ಷರು

ಸಿ) ಪದಾಧಿಕಾರಿಗಳು

ಡಿ) ಆಡಳಿತ ಮಂಡಲಿ

**6. ಸಹಕಾರ ಸಂಘದಲ್ಲಿ ಸಾಮಾನ್ಯ ಸಭೆ ದಿನಾಂಕ ನಿಗದಿಪಡಿಸುವ ಅಧಿಕಾರ ................. ರವರಿಗಿದೆ.**

ಎ) ಅಧ್ಯಕ್ಷರು

ಬಿ) ಪದಾಧಿಕಾರಿಗಳು

ಸಿ) ಆಡಳಿತ ಮಂಡಲಿ

ಡಿ) ನಿಬಂಧಕರು

**7. ಸಹಕಾರ ಸಂಘದಲ್ಲಿ ಸದಸ್ಯರು ಐದು ಸಾಮಾನ್ಯ ಸಭೆಗಳ ಪೈಕಿ ಮೂರು ಸಾಮಾನ್ಯ ಸಭೆಗಳಿಗೆ ಗೈರು ಹಾಜರಾದ್ದಲ್ಲಿ ............... ಅವಧಿಗೆ ಮತದಾನದ ಹಕ್ಕನ್ನು ಕಳೆದುಕೊಳ್ಳುತ್ತಾರೆ.**

ಎ) ಐದು ವರ್ಷಗಳು

ಬಿ) ಎರಡು ವರ್ಷಗಳು

ಸಿ) ಒಂದು ವರ್ಷ

ಡಿ) ಮೂರು ವರ್ಷಗಳು

**8. ಸಾಮಾನ್ಯ ಸಭೆಗೆ ಅಗತ್ಯವಿರುವ ಕೋರಂ ಸಂಖ್ಯೆ ..................**

ಎ) 50 ಸದಸ್ಯರು

ಬಿ) ಒಟ್ಟು ಅರ್ಹ ಸದಸ್ಯರಲ್ಲಿ 1/20 ಭಾಗ

ಸಿ) ಒಟ್ಟು ಅರ್ಹ ಸದಸ್ಯರಲ್ಲಿ 1/10 ಅಥವಾ ಸಾವಿರ ಯಾವುದು ಕಡಿಮೆಯೋ ಅದು

ಡಿ) ಯಾವುದು ಅಲ್ಲ

**9. ಆಡಳಿತ ಮಂಡಲಿ ನಿಗಧಿತ ಅವಧಿಯಲ್ಲಿ ಸಾಮಾನ್ಯ ಸಭೆ ನಡೆಸಲು ವಿಫಲರಾದಲ್ಲಿ ಆಗುವ ಪರಿಣಾಮಗಳು .....................**

ಎ) ಆಡಳಿತ ಮಂಡಲಿ ಸದಸ್ಯರು ನಿರ್ದೇಶಕ ಸ್ಥಾನಕ್ಕೆ ಅನರ್ಹರಾಗುತ್ತಾರೆ.

ಬಿ) ಆಡಳಿತ ಮಂಡಲಿ ಸದಸ್ಯರು ಚುನಾವಣೆಗೆ ಸ್ಪರ್ಧಿಸಲು, ಮುಂದುವರೆಯಲು ನೇಮಕವಾಗಲು ಅನರ್ಹರಾಗುತ್ತಾರೆ.

ಸಿ) ಆಡಳಿತ ಮಂಡಲಿ ಸ್ಥಾನದಲ್ಲಿ ಆಡಳಿತಾಧಿಕಾರಿ ನೇಮಕರಾಗುತ್ತಾರೆ.

ಡಿ) ಮೇಲಿನ ಎಲ್ಲವು

**10. ಸಾಮಾನ್ಯ ಸಭೆಯನ್ನು ಪ್ರತಿ ವರ್ಷ ..................... ದಿನಾಂಕದೊಳಗಾಗಿ ನಡೆಸುವುದು ಕಡ್ಡಾಯವಾಗಿದೆ.**

ಎ) 30ನೇ ಸೆಪ್ಟೆಂಬರ್

ಬಿ) 15ನೇ ಸೆಪ್ಟೆಂಬರ್

ಸಿ) 25ನೇ ಸೆಪ್ಟೆಂಬರ್

ಡಿ) 30ನೇ ಆಗಸ್ಟ್

**ಹಿಂದಿನ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಗಳು :**

1 -C , 2 -D , 3 –C , 4 –B , 5 – B, 6 – C, 7 – B, 8 – D, 9 –D , 10 – C